ಕಾಗದ

ಜೂನ್-2025

ನಿಸರ್ಗದೆಡೆಗೆ ಪಯಣ

WCG
Wildlife Conservation Group

ಕಾನನ

ನಿಸರ್ಗದೆಡೆಗೆ ಪಯಣ

© ವಿನೋದ್ ಕುಮಾರ್ ವಿ. ಕೆ.

ಪ್ರಧಾನ ಸಂಪಾದಕರು

ಡಾ. ಅಶ್ವಥ ಕೆ. ಎನ್.

ಮುಖ್ಯ ಸಂಪಾದಕರು

ನಾಗೇಶ್ ಒ. ಎಸ್.

ಸಹ ಸಂಪಾದಕರು

ಧನರಾಜ್ ಎಂ.

ಮಹದೇವ ಕೆ. ಸಿ.

ಸಂಪಾದಕೀಯ ತಂಡ

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಶ್ರುತಿ ರೈ ಕೆ.

ಜೂನ್–2025

WCG
Wildlife Conservation Group

ಲೇಖನಗಳು

* ಜೇಡಗಳ ಜಾಡಿನಲ್ಲಿ – ಮಂಜುನಾಥ್ ಅಮಲಗೊಂದಿ
* ಹಾವು ಎಣೆ ಆಡುವುದೇಕೆ? – ಸೌಮ್ಯ ಅಭಿನಂದನ್
* ವೈಮಾನಿಕ ದಾಳಿಕೊರ ಪರಭಕ್ಷಕ ಕೀಟ "ಸೀಳು ಕಣ್ಣಿನ ಗೂಬೆ ನೋಣ" – ಶಶಿಧರಸ್ವಾಮಿ ಆರ್. ಹಿರೇಮಠ
* ವನಬಂಧ – 01 – ಅಕ್ಷತ ಹೆಚ್. ಕೆ.
* ಜೈವಿಕ ಗಡಿಯಾರ ಬಲ್ಲಿರಾ? (ವಿವಿ ಅಂಕಣ) – ಜೈಕುಮಾರ್ ಆರ್.
* ಬೆಳೆಸುವ ಹಸಿರು (ಕವನ) – ಶುಭಲಕ್ಷ್ಮಿ ಆರ್. ನಾಯಕ
* ಪ್ರಕೃತಿ ಬಿಂಬ – ಗಿರೀಶ್ ಗೌಡ
  ದೀಪ್ತಿ ಎನ್.

ಮುಖಪುಟ ಛಾಯಾಚಿತ್ರ
ಗರಗಸ ಮಂಡಲ

ಮುಖಪುಟ
ಡಾ. ಅಶ್ವಥ ಕೆ. ಎನ್.

ವಿನ್ಯಾಸ
ಧನರಾಜ್ ಎಂ.

© ಗುರುಪ್ರಸಾದ್ ಕೆ. ಆರ್.

ಜೇಡಗಳ ಜಾಡಿನಲ್ಲಿ

ಬೆಳ್ಳಂಬೆಳಿಗ್ಗೆ ಮಂಜು ಕವಿದು ದೂರದ ಗಿಡಮರಗಳು ಕಾಣದೆ ಮಸುಕಾಗಿದ್ದವು. ಈ ಚುಮು-ಚುಮು ಚಳಿಯಲ್ಲಿ ಅಮ್ಮನ ಮಾತುಗಳ ಆರ್ಭಟಕ್ಕೆ ಮಲಗಿದ್ದವನು ಎದ್ದು ಸೀದಾ ಹಸು ಕಟ್ಟಿದ ಕೊಟ್ಟಿಗೆ ಕಡೆ ನಡೆದೆ. ಹಸುವಿನ ಹಾಲು ಕರೆದು ಅದನ್ನು ಕೊಟ್ಟಿಗೆಯಿಂದ ಹೊರಕ್ಕೆ ಕಟ್ಟಿಹಾಕಿ ರಾತ್ರಿಯಿಡೀ ಹಸು ಹಾಕಿದ್ದ ಸಗಣಿಯನ್ನು ಮನೆಯ ಹಿಂದೆಯಿದ್ದ ತಿಪ್ಪೆಗೆ ಸೇರಿಸಿದೆ. ಅಷ್ಟರಲ್ಲಾಗಲೇ ನನ್ನ ಮೂರು ವರ್ಷದ ಮಗಳು ವನ್ಯ ತಾನು ಮಲಗಿದ್ದ ಮಂಚದ ಮೇಲಿಂದ ಇಳಿದು ಅಲ್ಲಿಯೇ ಮೆಟ್ಟಿಲ ಹತ್ತಿರ ಹೋಗಿ ತಲೆ ಮೇಲೆತ್ತಿ ತದೇಕಚಿತ್ತದಿಂದ ಸುಮ್ಮನೆ ನೋಡುತ್ತಾ ನಿಂತಿದ್ದಳು. ಅದೇ ಸಮಯಕ್ಕೆ ನಾನು ಗೇಟ್ ತೆಗೆದು ಒಳಗೆ ಪ್ರವೇಶಿಸಿದೆ. "ಮಂಜಪ್ಪ ಅಲ್ಲಿ ನೋಡು ಚಿಗ್ನೇಚರ್ ಪೈಡರ್ ಎಷ್ಟು ಚೆನ್ನಾಗಿದೆ. ರಾತ್ರಿಯಿಂದ ಅದು ಇಲ್ಲೇ ಇದೆ, ಪಾಪ ಅದರ ಮನೆಗೆ ಹೋಗೆ ಇಲ್ಲ" ಎನ್ನುತ್ತಾ ಮೆಟ್ಟಿಲನ ಎರಡು ಗೋಡೆಗಳನ್ನು ಆಧಾರವಾಗಿಸಿಕೊಂಡು ಬಲೆಯನ್ನು ನೇಯ್ದು ಮಾಡಿ ಮಧ್ಯದಲ್ಲಿ ಧ್ಯಾನಸ್ಥರಂತೆ ತನ್ನ ಆಹಾರಕ್ಕಾಗಿ ಬಲಿಯನ್ನು ಕಾಯುತ್ತಿದ್ದ ಜೇಡವನ್ನು ತನ್ನ ಬಲಗೈ ತೋರು ಬೆರಳಿನಿಂದ ತೋರಿಸಿದಳು. ಹಿಂದಿನ ದಿನದ ರಾತ್ರಿ "ವನ್ಯ ಬಾ ಚಂದಿರ ಬಂದಿದ್ದಾನೆ ನೋಡೋಣ" ಅಂತಾ ಮೆಟ್ಟಿಲನ್ನು ಏರಿ ಮನೆ ಮೇಲಕ್ಕೆ ತೆರಳುತ್ತಿದ್ದಾಗ ಜೇಡರ ಬಲೆಯನ್ನು ಅವಳಿಗೆ ತೋರಿಸಿ "ವನ್ಯ ನೋಡಿಲ್ಲಿ ಜೇಡ ಬಲೆ ಕಟ್ಟಿದೆ. ಮಧ್ಯದಲ್ಲಿ ಕುಳಿತಿರುವುದು ಸಿಗ್ನೇಚರ್ ಸ್ಪೈಡರ್. ಎಷ್ಟು ಚಂದ ಇದೆ ಅಲ್ವಾ?!... ಎಂದು ಅವಳಿಗೆ ಕುತೂಹಲವನ್ನು ಹೆಚ್ಚಿಸುವಂತೆ ಹೇಳಿದ್ದೆ. ಆಗ ಅವಳು ಅದನ್ನು ಮುಟ್ಟಲು ಮುಂದಾದಳು. ಅವಳ ಚಲನೆ ಗಮನಿಸಿದ ನಾನು "ಏ ಮಗಳೇ, ಅದನ್ನು ಮುಟ್ಟಬಾರದು ಅದು ಕಚ್ಚಿಬಿಡುತ್ತದೆ. ಹಿಂದೆ ಬಾ ಅದರ ಹತ್ತಿರ ಹೋಗಬೇಡ" ಎಂದು ಎಚ್ಚರಿಸಿದ್ದೆ. ಆಯ್ತು

ಅಪ್ಪ ಮುಟ್ಟಲ್ಲವೆಂದು ಹಿಂದೆ ಸರಿದು ಅದನ್ನು ತುಂಬಾ ಕುತೂಹಲದಿಂದ ವೀಕ್ಷಿಸಿದ್ದಳು. ಇಷ್ಟೆಲ್ಲಾ ನಡೆಯುವುದರೊಳಗೆ ನಾವು ಮನೆ ಮೇಲೆ ಬಂದ ಉದ್ದೇಶವನ್ನೇ ಮರೆತುಬಿಟ್ಟಿದ್ದೆವು. ಆದರೂ ನಾನು ಅವಳಿಗೆ ಹಾಲಿನಂತೆ ಬೆಳಕು ಚೆಲ್ಲುತ್ತಿದ್ದ ಚಂದ್ರನನ್ನು ತೋರಿಸಿಕೊಂಡು ಕೆಳಗಿಳಿದು ರೂಮಿಗೆ ಬಂದು ಮಲಗುವುದರೊಳಗೆ ಗಂಟೆ ಹತ್ತಾಗಿತ್ತು. ರಾತ್ರಿಯಲ್ಲಿ ಇವಳಿಗೆ ಸಿಗ್ನೇಚರ್ ಸ್ಪೈಡರ್ ದೇ ಕನಸು ಬಿದ್ದಿರಬೇಕೇನೋ? ಅದಕ್ಕೆ ಹಾಸಿಗೆಯಿಂದ ಎದ್ದವಳೇ ಸೀದಾ ಜೇಡರ ಬಲೆಯನ್ನು ಹರಿಸಿ ಬಂದು ತೋರಿಸಿದ್ದಿರಬೇಕು.



ಕೆಲವು ವರ್ಷಗಳ ಹಿಂದೆ ಸ್ನೇಹಿತರಾದ ಶಿಡ್ಲಘಟ್ಟದ ಅನಂತಲಕ್ಷ್ಮೀ ರವರು ಫೋನ್ ಮಾಡಿ "ಸರ್, ನಿಮ್ಮ ಮೊಬೈಲ್ಗೆ ಒಂದು ಫೋಟೋ ಕಳಿಸಿದ್ದೇನೆ ನೋಡಿ. ನಮ್ಮ ಮನೆಯ ಪಕ್ಕದ ಕೈತೋಟದಲ್ಲಿನ ದಾಳಿಂಬೆ ಗಿಡದಲ್ಲಿ ಒಂದು ಬಲೆ ಹೆಣೆದು ಚಲನೆ ಮಾಡದೆ ಸುಮ್ಮನೆ ಕುಳಿತಿದೆ. ಇದು ಯಾವ ಜೀವಿಯಿದು?" ಎಂದು ಕೇಳಿದ್ದರು. ನಾನು ವಾಟ್ಸಪ್ ತೆರೆದು ನೋಡಿ ಕರೆಯಲ್ಲಿಯೇ ಇದ್ದ ಅವರಿಗೆ "ಮೇಡಂ ಇದು ಸಿಗ್ನೇಚರ್ ಸ್ಪೈಡರ್, ಅದೇನು ಮಾಡಲ್ಲ ನಿಮ್ಮ ಗಿಡಗಳಿಗೆ ಬರುವ ಕೀಟಗಳನ್ನು ನಿಯಂತ್ರಣ ಮಾಡುತ್ತದೆ. ಕೀಟಗಳನ್ನು ಹಿಡಿಯಲು ಬಲೆ ಹೆಣೆದು, ಬೇಟೆಗಾಗಿ ಕಾಯುತ್ತಾ ಕುಳಿತಿರಬೇಕು. ಅದಕ್ಕೆ ಏನು ತೊಂದರೆ ಮಾಡಬೇಡಿ" ಎಂದು ಹೇಳಿ ಮೊಬೈಲ್ನ ಕೆಂಪು ಬಟನ್ ಒತ್ತಿ ಜೇಬಿಗಿಳಿಸಿಕೊಂಡೆ.

ಮೊನ್ನೆ ನನ್ನ ಮಡದಿ ಯಶೋಧ, ಮಗಳು ವನ್ಯ, ಮಗನಾದ ನೇಸರ ಈ ಮೂವರು ನಮ್ಮ ತೋಟದ ಹಿಂದೆ ಇದ್ದ ಅವರ ದೊಡ್ಡಮ್ಮನ ಮನೆ ಹತ್ತಿರ ಹೋಗಿ ವಾಪಸ್ಸಾಗುತ್ತಿರುವಾಗ, ತೋಟದ ಬದುವಿನ ಪಕ್ಕದಲ್ಲಿ ಮುಳ್ಳು ತಂತಿಗಳಿಗೆ ಬಲೆಯನ್ನು ಹೆಣೆದು ಮಧ್ಯದಲ್ಲಿ ಕುಳಿತಿದ್ದ ಜೇಡವನ್ನು ಸೂಕ್ಷ್ಮವಾಗಿ ಗಮನಿಸಿದ ವನ್ಯ "ಅಮ್ಮ ಚಿಗ್ನೇಚರ್ ಪೈಡರ್" ಎಂದು ಹೇಳಿದ್ದಾಳೆ. ಆದರೆ ಯಶೋಧನಿಗೆ ಅದು ಅರ್ಥವಾಗದೆ ಸುಮ್ಮನೆ ಮುನ್ನಡೆದು ಬಂದಿದ್ದಾರೆ. ಅದೇ ಸಮಯಕ್ಕೆ ತೋಟದಲ್ಲಿ ನನ್ನನ್ನು ನೋಡಿದ ವನ್ಯ "ಅಪ್ಪ ಇಲ್ಲೊಂದು ಚಿಗ್ನೇಚರ್ ಪೈಡರ್ ನೋಡು ಬಾ" ಎಂದು ಕೂಗಿ ಹೇಳಿದಳು. ಆಗ ಇವಳಿಗೆ ಜೇಡಗಳ ಬಗ್ಗೆ ಎಷ್ಟು ಕುತೂಹಲ ಮತ್ತು ಸೂಕ್ಷ್ಮತೆಯಿದೆ ಎಂದು ಆಶ್ಚರ್ಯಪಟ್ಟುಕೊಳ್ಳುತ್ತಾ ಅಲ್ಲಿಗೆ ಹೋಗಿ ಯಶೋಧಳಿಗೆ ಜೇಡವನ್ನು ತೋರಿಸಿ ಉಪಯುಕ್ತವಾದ ಅಂಶಗಳನ್ನು ತಿಳಿಸಿದೆ. "ವನ್ಯ ಜಾಣೆ, ಸ್ಪೈಡರ್ ಗಳನ್ನು ಎಷ್ಟು ಬೇಗ

ಹುಡುಕುತ್ತಾಳೆ" ಎಂಬ ಯಶೋಧನ ಮಾತಿಗೆ ಮಗಳು ನಗುತ್ತಾ ನುಲಿಯುತ್ತಾ ನಲಿದಾಡಿದಳು. ಈ ಸಿಗ್ನೇಚರ್ ಸ್ಪೈಡರ್ ಗಳು ತನ್ನ ನಾಲ್ಕು ಜೊತೆ ಕಾಲುಗಳನ್ನು ಹರಡಿಕೊಂಡು ಬಲೆಯ ಮಧ್ಯೆ ಶವಸ್ಥಿತಿಯಲ್ಲಿ ಇರುತ್ತವೆ. ಕಾಲಿನ ಪಕ್ಕದಲ್ಲಿ ಬಲೆಯ ಮೇಲೆ ಸಹಿ ಮಾಡಿದಂತೆ ಜಿಗ್ ಜಾಗ್ ರೀತಿ ಪದರಗಳು ಇರುವುದರಿಂದ ಈ ಹೆಸರು ಬಂದಿರಬೇಕೆಂದೆನಿಸುತ್ತದೆ. ನಾವು ಹತ್ತಿರ ಹೋದರೂ ಅಲುಗಾಡುವುದಿಲ್ಲ. ತನ್ನ ಬಲಿಯು ಬಲೆಗೆ ಬೀಳುವವರೆಗೂ ಅನೇಕ ದಿನಗಳ ಕಾಲ ಅದೇ ಸ್ಥಿತಿಯಲ್ಲಿರುತ್ತವೆ. ಕನ್ನಡದಲ್ಲಿ ಇದಕ್ಕೆ ದಸ್ಕತ್ ಜೇಡ ಎಂದೂ ಸಹ ಕರೆಯುತ್ತಾರೆ. ಇವುಗಳು ವೈಜ್ಞಾನಿಕವಾಗಿ ಆರ್ಗಿಯೋಪೇ (*Argiope*) ಜಾತಿಗೆ ಸೇರಿದವು. ಇವುಗಳು ಹೆಚ್ಚಾಗಿ ಅರಣ್ಯ ಪ್ರದೇಶ ಮತ್ತು ತೋಟಗಳಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿರುತ್ತವೆ. ಸಾಧ್ಯವಾದರೆ ನೀವೂ ಸಹ ನಿಮ್ಮ ಕೈ ತೋಟಗಳಲ್ಲಿ ಒಮ್ಮೆ ಗಮನಿಸಿ ನೋಡಿ.

ಹೀಗೆ ಕೆಲವು ದಿನಗಳ ತರುವಾಯ ಒಂದು ರಾತ್ರಿ ಎಂಟು ಗಂಟೆಯ ಸಮಯ ಇರಬಹುದು. ನಾನು ನಮ್ಮನೆ ಅಂಗಳದಲ್ಲಿ ಸುಮ್ಮನೆ ಕುಳಿತಿದ್ದೆ. ಎಲ್‌ಇಡಿ ಬಲ್ಪ್ ನ ಬೆಳಕು ನನ್ನ ಕಣ್ಣಿಗೆ ಪ್ರಕಾಶಮಾನವಾಗಿ ಬೀಳುತ್ತಿತ್ತು. ಬಲ್ಪಿನ ಹಿಂಬದಿಯಲ್ಲಿ ಒಂದು ಜೇಡ ಹಸು ಕಟ್ಟಿ ಹಾಕುವ ಗೂಟಗಳ ಮಧ್ಯೆ ತನ್ನ ಆಹಾರವಾದ ಕೀಟಗಳನ್ನು ಮಿಕ ಮಾಡಿಕೊಳ್ಳಲು ಬಲೆಯನ್ನು ನೇಯುತ್ತಿತ್ತು. ತನ್ನ ಕಾಲುಗಳಿಂದ ಮೊದಲು ಬಿಟ್ಟಿದ್ದ ನೂಲಿನ ಮೇಲೆ ಸರಸರನೇ ನಡೆದು ತನ್ನ ದೇಹದ ಹಿಂಬದಿಯಿಂದ ಬರುವ ನೂಲನ್ನು ಮೊದಲ ನೂಲಿಗೆ ತನ್ನ ಕಾಲುಗಳಿಂದ ಹೆಣೆದು ಮುನ್ನಡೆಯುತ್ತಿತ್ತು. ಕುತೂಹಲದಿಂದ ಬಲೆಯ ಸನಿಹದಲ್ಲಿ

ಸೂಕ್ಷ್ಮವಾಗಿ ಗಮನಿಸುತ್ತಾ ಕೆಲ ನಿಮಿಷಗಳ ಕಾಲ ಸುಮ್ಮನೆ ನಿಂತು ನೋಡುತ್ತಿದ್ದೆ. ಅದೇ ಸಮಯಕ್ಕೆ ನಮ್ಮ ಅಮ್ಮ ಬಂದು "ಏನು ನೋಡುತ್ತಿದ್ದೀಯಾ?! ಅಲ್ಲಿ ನಿಂತ್ಕೊಂಡು. ಕತ್ತಲಲ್ಲಿ ಹುಳು-ಹುಪ್ಪಟೆ ಬರ್ತಾವೆ" ಎಂದು ಮೇಲು ದನಿಯಲ್ಲಿ ಕೇಳಿದರು. ಅವರಿಗೆ ನನ್ನ ಚಲನವಲನಗಳಿಂದ ಸಂಶಯವಿದ್ದಿರಬೇಕು. ಏಕೆಂದರೆ ಕೆಲವು ಬಾರಿ ನಮ್ಮ ಅಂಗಳಕ್ಕೆ ಬಂದ ಹಾವುಗಳನ್ನು ಮನೆಯವರಿಗೆ ಗೊತ್ತಿಲ್ಲದಂತೆ ಅವುಗಳನ್ನು ಅಲ್ಲಿಂದ ಬಚಾವ್ ಮಾಡಿ ಇವರ ಕೈಯಲ್ಲಿ ಬಲಿಯಾಗುತ್ತಿದ್ದ ಹಾವುಗಳನ್ನು ಪಾರು ಮಾಡಿದ್ದೇನೆ. ಹಾಗಾಗಿ ಇವತ್ತೂ ಸಹ ಯಾವುದೋ ಹಾವು ಬಂದಿರಬೇಕು, ಇವನು ಅದಕ್ಕೆ ಡೈರೆಕ್ಷನ್ ತೋರಿಸುತ್ತಿರಬೇಕೆಂದು ತಿಳಿದು ನಾನಿದ್ದಲ್ಲಿಗೆ ಬಂದುಬಿಟ್ಟರು ನಮ್ಮ ಜನ್ಮದಾತೆ. ಆದರೆ ಅವರು ಊಹಿಸಿದಂತೆ ಸನ್ನಿವೇಶವಿರಲಿಲ್ಲ. ನಾನು ಮತ್ತದೇ ಜೇಡವು ಬಲೆ ನೇಯ್ಗೆ ಮಾಡುವುದನ್ನು ನೋಡುತ್ತಾ ನಿಂತೆ. ನಮ್ಮಮ್ಮ ನಾನಿದ್ದಲ್ಲಿಗೆ ಬಂದ ತಕ್ಷಣ ಆ ಜೇಡ ತನ್ನ ಕಾಯಕ ನಿಲ್ಲಿಸಿತು. "ಈ ಜಾಡುಳ ಜಾಡ್ ಕಟ್ಟುತ್ತಿರುವುದನ್ನು ಸುಮ್ನೆ ನೋಡ್ಕೊಂಡ್ ನಿಂತವ್ನೆ ಅದನ್ನು ಸಾಯ್ಸದ್ ಬಿಟ್ಟು. ಇಲ್ಲಿ ಮಕ್ಕಳು ಮರಿ ಓಡಾಡ್ತಾವೆ" ಎನ್ನುತ್ತಾ ಕಸ ಗುಡಿಸಲು ತಂದಿದ್ದ ಪೊರಕೆಯಲ್ಲಿ ಬಲೆಯನ್ನು ಜಾಡಿಸಿಯೇಬಿಟ್ಟರು. ನನಗೆ ಕೋಪ ನೆತ್ತಿಗೇರಿ ಅವರ ಕಡೆ ತಿರುಗಿ ನೋಡಿ "ಅದೇನ್ ಮಾಡ್ತು ನಿಮ್ಸ, ನಿಮ್ಮ ಮನೆಯೊಳಕ್ಕೆ ಬಂದಿದ್ಯಾ? ಅದರ ಪಾಡಿಗೆ ಅದು ಕೆಲಸ ಮಾಡಿಕೊಳ್ಳುತ್ತಿತ್ತು. ನಿಮಗೇನು ಮಾಡಕ್ಕೆ ಬೇರೆ ಕೆಲಸ ಇಲ್ವಾ?" ಎಂದು ರೇಗಿದೆ. ಕೋಪಿಸಿಕೊಂಡಿದ್ದ ನನಗೆ ಇನ್ನೂ ಹೆಚ್ಚು ಕೋಪ ಬರುವಂತೆ ಪ್ರತ್ಯುತ್ತರ ನೀಡುತ್ತಾ ನಮ್ಮಮ್ಮ "ಅವುಗಳ ಒಂದ್ ಫಾರಂ ಮಾಡ್ಕೊಂಡು ಸಾಕೊಂಡು ಬಿಡು. ಅವುಗಳ ಜೊತೆಲೇ ನೀನು ಇದ್ಬುಡು" ಎಂದು ಹೇಳಿ ಮನೆಯೊಳಕ್ಕೆ ಹೋಗಿಬಿಟ್ಟರು. ಮಾನವರು ತಾವೊಬ್ಬರೇ ಈ ಭೂಮಿಯಲ್ಲಿ ಬದುಕಬೇಕೆಂಬ ಹಂಬಲದಿಂದ ಯಾವುದೇ ತಪ್ಪು ಮಾಡದ ಪರೋಪಕಾರಿ ಜೀವಿಗಳನ್ನು ಸಹ ಅವಸಾನದ ಅಂಚಿಗೆ ತಳ್ಳುತ್ತಿದ್ದಾರೆ ಎಂದೆನಿಸಿತು. ಪರಿಸರ ವ್ಯವಸ್ಥೆಯಲ್ಲಿನ ಕೀಟ ನಿಯಂತ್ರಿಸುವಲ್ಲಿ ಜೇಡಗಳು ಪ್ರಮುಖವಾದ ಪಾತ್ರವಹಿಸಿವೆ. ಈ ಹುಲು ಮಾನವರಿಗೆ ಇವೆಲ್ಲಾ ಅರ್ಥವಾಗುವುದು ಯಾವಾಗ? ಎಂಬ ಪ್ರಶ್ನೆ ಮನದಲ್ಲಿ ಕಾಡತೊಡಗಿತು.

ಕೆಲವು ವರ್ಷಗಳ ಹಿಂದೆ ಆಸಕ್ತ ಕೃಷಿ ಮತ್ತು ಪರಿಸರ ಬರಹಗಾರರೊಂದಿಗೆ ಕೊಡಗಿನ ಅಧ್ಯಯನ ಪ್ರವಾಸಕ್ಕೆಂದು ಕೊಡಗಿಗೆ ಹೋಗಿದ್ದೆವು. ಕೊಡಗಿನ ಚಿಂಗಾರ ಹನಿವ್ಯಾಲಿ ಎಸ್ಟೇಟ್ ನ ಅತಿಥಿ ಗೃಹದಲ್ಲಿ ಎರಡು ದಿನಗಳ ಕಾಲ ಉಳಿದುಕೊಂಡಿದ್ದೆವು. ರಾತ್ರಿಯ ಊಟಕ್ಕೆಂದು ಎಲ್ಲರೂ ಊಟದ ಮನೆಯಲ್ಲಿ ಠಿಕಾಣಿ ಹೂಡಿದೆವು. ನನಗೆ ಶೀತವಿದ್ದ ಕಾರಣ ಬಿಸಿನೀರಿಗೆ ಬೇಡಿಕೆ ಇಡಲು ಅಡುಗೆ ಮನೆಗೆ ಹೋದೆನು. ನನಗೆ ಅಡುಗೆಮನೆ ನೋಡಿ ತುಂಬಾ ಖುಷಿಯಾಯಿತು. ಅಡುಗೆ ಮಾಡುವ ಜಾಗದಲ್ಲಿ ಜೇಡಗಳ ಬಲೆಯನ್ನು ನಾಶ ಮಾಡದೆಯೇ ಸ್ವಚ್ಛತೆಯಿಂದ ಇಟ್ಟುಕೊಂಡಿದ್ದರು. ನನಗೆ ಒಂದೆಡೆ ಇಂತಹ ಜೀವಸಂಕುಲ ಸ್ನೇಹಿ ಹೋಮ್ ಸ್ಟೇ ಮಾಲೀಕರುಗಳು ಇರುತ್ತಾರಾ!?... ಎಂದು ಆಶ್ಚರ್ಯಪಟ್ಟೆ. ಊಟದ ನಂತರ ಅತಿಥಿ ಗೃಹದ ಮಾಲೀಕರಾದ ಸುರೇಶ್ ಚೆಂಗಪ್ಪ ರವರನ್ನು ಭೇಟಿ ಮಾಡಿ ಜೇಡಗಳ ಬಗೆಗಿನ ಅವರ ಆಸಕ್ತಿಯನ್ನು ತಿಳಿಯಲು ಪ್ರಯತ್ನಿಸಿದೆ. ಅವರು ನಮಗೆ ಪ್ರತ್ಯುತ್ತರಿಸುತ್ತಿದ್ದರು. ಅಲ್ಲಿದ್ದ "ನಮ್ಮ ಹೋಂ ಸ್ಟೇಗೆ ಒಬ್ಬ ವಿದೇಶಿ ವ್ಯಕ್ತಿ ಬಂದಿದ್ದನು. ಅವನು 30 ವರ್ಷಗಳಿಂದ ಜೇಡಗಳ ಬಗ್ಗೆಯೇ ಅಧ್ಯಯನ ಮಾಡುತ್ತಿದ್ದಾನೆ. ಅವನು ಹೇಳಿದ ಜೇಡಗಳ ಬಗೆಗಿನ ಆಸಕ್ತಿಕರ ವಿಚಾರಗಳು ನನ್ನನ್ನು ಹೆಚ್ಚು ಪ್ರಭಾವಿಸಿದವು. ಮುಂಚೆಯೂ ಸಹ ನನಗೆ ಜೇಡಗಳ ಬಗ್ಗೆ ಸ್ವಲ್ಪ ಕುತೂಹಲವಿತ್ತು ಅವರು ಇಲ್ಲಿಗೆ ಬಂದು ಹೋದ ಮೇಲಂತೂ ಜೇಡಗಳನ್ನು ಬಹಳ ಸೂಕ್ಷ್ಮವಾಗಿ ಗಮನಿಸಿ ಅವುಗಳಿಗೆ ತೊಂದರೆಯಾಗದಂತೆ ನಡೆದುಕೊಳ್ಳುತ್ತಿದ್ದೇವೆ." ಎಂದು ಹೇಳಿದರು. ಆ ವಿದೇಶಿಗ ಅಂದೆಂತಹ ಅಗಾಧ ಪರಿಸರ ಪ್ರೇಮಿ ಇರಬೇಕು!? ತನ್ನ ಜೀವಮಾನವಿಡೀ ಜೇಡಗಳ ಅಧ್ಯಯನಕ್ಕೆ ಮುಡುಪಾಗಿಟ್ಟಿದ್ದಾನೆ ಎಂದುಕೊಂಡು ಮನದಲ್ಲೇ ಶಭಾಷ್ಗಿರಿ ಅರ್ಪಿಸಿದೆನು. ಅಲ್ಲಿಂದ ನಾನು ಸಹ ಜೇಡಗಳ ಬಗ್ಗೆ ಇನ್ನು ಸೂಕ್ಷ್ಮವಾಗಿ ಗಮನಿಸತೊಡಗಿದೆ.

ಬೇಸಿಗೆ ಬಂತೆಂದರೆ ನಮ್ಮ ತೋಟಕ್ಕೆ ನೀರಿನ ಅಭಾವ ಪ್ರತಿವರ್ಷ ತಪ್ಪಿದ್ದಲ್ಲ. ಹಗಲು ರಾತ್ರಿ ಕರೆಂಟ್ ಬರುವುದನ್ನೇ ಕಾದುಕುಳಿತು ಎಲ್ಲಾ ಗಿಡಗಳಿಗೆ ನೀರು ಸಮವಾಗಿ ಹೋಗಲು ಗೇಟ್ವಾಲ್ ಬದಲಾಯಿಸುವುದಕ್ಕೆ ಹೆಣಗಾಡಬೇಕು. ಆ ದಿನ ಬೆಳಗ್ಗಿನ ಕರೆಂಟ್ ಶಿಫ್ಟ್ ಇದ್ದ ಕಾರಣ ಬೆಳ್ಳಂಬೆಳಗ್ಗೆ ತೋಟದ ಕಡೆ ನಡೆದು ಗೇಟ್ವಾಲ್ ತಿರುಗಿಸಿ ಎಲ್ಲಾ ಗಿಡಗಳಿಗೆ ನೀರು ಹೋಗುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಅಡಿಕೆ ಮರಗಳ ಸಾಲುಗುಂಟ ಹೋಗುತ್ತಿದ್ದೆನು. ಬದುವಿನ ಹತ್ತಿರವಿದ್ದ ಕೊನೆ ಗಿಡದ ಬುಡದಲ್ಲಿ ಬಿಳಿ ಹತ್ತಿಯ ಬಟ್ಟೆಯಂತೆ ಅರಳಿಕೊಂಡಿದ್ದ ಬಲೆ ಕಾಣಿಸಿತು. ಅದರ ಮಧ್ಯೆ ಒಂದು ದೊಡ್ಡದಾದ ರಂಧ್ರವಿದ್ದು, ರಂಧ್ರದೊಳಗೆ ಕಪ್ಪಗೆ ಏನೋ ಅವಿತು ಕುಳಿತಂತೆ ಭಾಸವಾಯಿತು. ಸ್ವಲ್ಪ ಸಮಯ ಅಲ್ಲೇ ಕುಳಿತು ವೀಕ್ಷಿಸುತ್ತಿದ್ದೆ, ನನ್ನ ಕೈಯಿಂದ ಹಗುರವಾದ ಸ್ಪಂಜಿನಂತಹ ಬಲೆಯನ್ನು ಸ್ಪರ್ಶಿಸಿದ್ದೇ ತಡ ಒಳಗಿಂದ ಉದ್ದನೆಯ ಜೇಡವೊಂದು ರಂಧ್ರದ ಮೂಲಕ ಹೊರಗೆ ಬಂದು ಇಣುಕಿ ನೋಡಿ ಯಾವುದೇ ಮಿಕ ಬಿದ್ದಿಲ್ಲವೆಂದು ನಿರಾಶೆಯಿಂದ ಕ್ಷಣಾರ್ಧದಲ್ಲಿ ಒಳಹೊಕ್ಕಿತು. ನನಗೆ ಕುತೂಹಲ ಹೆಚ್ಚಾಗಿ ನನ್ನ ಕಾಲ ಮೇಲೆ ಕುಳಿತು

ರಕ್ತವನ್ನು ಹೀರಲು ಹವಣಿಸುತ್ತಿದ್ದ ಸೊಳ್ಳೆಯನ್ನು ಬಡಿದು ಕೈಯಿಂದ ಸತ್ತ ಸೊಳ್ಳೆಯನ್ನು ಎತ್ತಿ ಆ ಸ್ಪಂಜಿನಂತ ಬಲೆಯ ಮೇಲೆ ಹಾಕಿದೆ. ಮತ್ತೆ ಸ್ಪರ್ಶವಾದ ಕ್ಷಣಮಾತ್ರದಲ್ಲಿ ಒಳಗೆ ಅವಿತು ಕುಳಿತ ಜೇಡವು ಹೊರಬಂದು ಸತ್ತ ಸೊಳ್ಳೆಯನ್ನು ನೋಡಿ ತನಗೆ ಬೇಡವಾದ ಆಹಾರ ಎಂಬಂತೆ ನಿರಾಕರಿಸಿ ಮತ್ತೆ ಒಳಹೊಕ್ಕಿ ಜೀವಂತ ಪ್ರಿಯವಾದ ಭೇಟಿಗಾಗಿ ಕಾಯುತ್ತಾ ಕುಳಿತಿತು. ಎಲ್ಲಾ ಪ್ರಭೇದದ ಜೇಡಗಳು ಒಂದೇ ರೀತಿಯ ಬಲೆಯನ್ನು

ನೇಯುವುದಿಲ್ಲ. ವಿಭಿನ್ನ ರೀತಿಯಲ್ಲಿ ತನ್ನ ಆಹಾರದ ಜೀವಿಗಳನ್ನು ಬಲಿ ಹಾಕುತ್ತವೆ. ನಾನು ಮೇಲೆ ತಿಳಿಸಿದ್ದು ಹಿಪ್ಪಸ (Hippasa) ಜಾತಿಗೆ ಸೇರಿದ ಜೇಡ. ಇದು ನಾನು ಗಮನಿಸಿದಂತೆ ಹಗಲು ಮತ್ತು ರಾತ್ರಿ ಸಮಯದಲ್ಲೂ ಹೆಚ್ಚು ಸಕ್ರಿಯವಾಗಿರುತ್ತದೆ.

ಒಮ್ಮೆ ಮನೆಯ ಮುಂದಿನ ಹೂ ಗಿಡಗಳಿಗೆ ಬರುತ್ತಿದ್ದ ಚಿಟ್ಟೆಗಳನ್ನು ಗಮನಿಸುತ್ತಾ ಅವುಗಳು ಮಕರಂದ ಹೀರಲು ಹೂ ಮೇಲೆ ಕುಳಿತಾಗ ಫೋಟೋ ತೆಗೆಯಲು ಅವುಗಳ ಹಿಂದೆ ಹಿಂದೆ ಮೊಬೈಲ್ ಹಿಡಿದು ಓಡುತ್ತಿದ್ದೆ. ಮಾಸಲು ಬಣ್ಣದ ಒಂದು ಚಿಟ್ಟೆಯು ಚೆಂಡು ಹೂವಿನ ಆಕರ್ಷಣೆಗೆ ಒಳಗಾಗಿ 'ಯಾರ ಹಂಗಿಲ್ಲ ನನ್ನ ಹಾರಾಟಕ್ಕೆ' ಎಂಬಂತೆ ಹಳದಿ ಬಣ್ಣದ ಚೆಂಡು ಹೂವಿನ ಮೇಲೆ ಹೋಗಿ ಕುಳಿತುಕೊಂಡಿತು. ಇದರ ಹಿಂದೆ ಮೊಬೈಲಿನ ಕ್ಯಾಮೆರಾ ಆನ್ ಮಾಡಿಕೊಂಡು ಫೋಟೋ ಕ್ಲಿಕ್ಕಿಸಲು ಪ್ರಾರಂಭಿಸಿದೆನು. ಹತ್ತಿರದಲ್ಲೇ ಇದ್ದ ಮೊಬೈಲ್ಲೂ ಹೆದರದೆ ಸುಮ್ಮನೆ ಕುಳಿತು ಯಾವುದೇ ಚಲನವಲನವಿಲ್ಲದೆ ಸ್ತಬ್ಧವಾಯಿತು. ಅಯ್ಯೋ ಇದಕ್ಯಾವ ಗರ ಬಡಿಯಿತೆಂದು ಹೂವಿಗೆ ಇನ್ನೂ ಸ್ವಲ್ಪ ಸನಿಹವಾದೆ. ಆದರೆ ಅಲ್ಲಿ ಒಂದು ಅಚ್ಚರಿಯೇ ಕಾದಿತ್ತು. ಹೂವಿನೊಳಗೆ ಅವಿತು ಬೇಟೆಗಾಗಿ ಕಾಯುತ್ತಿದ್ದ ಜೇಡವೊಂದು ಚಿಟ್ಟೆಯ ತಲೆಯನ್ನೇ ಬಿಗಿಯಾಗಿ ಉಸಿರು ಕಟ್ಟುವಂತೆ ಹಿಡಿದು, ಬೇಟೆಗಾಗಿ

ತನ್ನಲ್ಲಿದ್ದ ವಿಷವನ್ನು ಚಿಟ್ಟೆಯ ದೇಹಕ್ಕೆ ಸೇರಿಸಿ ಆಹಾರವಾಗಿಸಿಕೊಂಡಿತ್ತು. ಅಷ್ಟು ದೊಡ್ಡ ಚಿಟ್ಟೆಯು ಜೇಡದ ಸುಳಿವನ್ನೇ ಅರಿಯದೆ ವಿಕವಾಗಿ ಹೋಯಿತು. ಈ ಜೇಡವನ್ನು ಸೂಕ್ಷ್ಮವಾಗಿ ಗಮನಿಸಿದಾಗ ನನಗೆ ತಿಳಿದದ್ದು ಇದು ಏಡಿಜೇಡವೆಂದು (Crab Spider). ವೈಜ್ಞಾನಿಕವಾಗಿ ಇದು ಥೋಮಿಸುಸ್ (Thomisus) ಜಾತಿಗೆ ಸೇರುತ್ತದೆ. ಈ ಜೇಡಗಳು ಹಗಲಿನಲ್ಲಿ ಸಕ್ರಿಯವಾಗಿದ್ದು, ಹೂವಿಗೆ ಬರುವ ಕೀಟಗಳು ಮತ್ತು ಪರಾಗಸ್ಪರ್ಶ ಮಾಡುವ ಜೀವಿಗಳೇ ಈ ಜೇಡಗಳ ಮುಖ್ಯವಾದ ಆಹಾರ.

ಹೀಗೆ ಜೇಡಗಳ ಬಗೆಗಿನ ನನ್ನ ಇನ್ನೂ ಕೆಲವು ಅನುಭವಗಳನ್ನು ಮುಂದಿನ ಸಂಚಿಕೆಯಲ್ಲಿ ಮುಂದುವರಿಸುತ್ತೇನೆ.

ಮುಂದುವರಿಯುತ್ತದೆ . . .

ಲೇಖನ: ಮಂಜುನಾಥ್ ಅಮಲಗೊಂದಿ

ತುಮಕೂರು ಜಿಲ್ಲೆ

ಹಾವು ಏಕೆ ಆಡುವುದೇಕೆ?

ಈ ಜಗತ್ತಿನ ಸೃಷ್ಟಿ ಒಂದು ಅದ್ಭುತ. ಅದರಲ್ಲೂ ಜೀವ ಸಂಕುಲಗಳ ಸೃಷ್ಟಿ ಅವುಗಳ ದೇಹ ರಚನೆ, ಸಹಬಾಳ್ವೆ, ಹೊಂದಾಣಿಕೆ ಇತ್ಯಾದಿಗಳನ್ನು ನೋಡಿದಾಗ ಮತ್ತು ಆಳವಾಗಿ ವೀಕ್ಷಿಸಿದಾಗ ಮಾತ್ರ ಅದರ ವಿಸ್ಮಯ ಅರಿವಿಗೆ ಬರುತ್ತದೆ.

ನಾನು ಕೊಡಚಾದ್ರಿ ತಪ್ಪಲಿನ ಪಶ್ಚಿಮ ಘಟ್ಟದ ಹೃದಯ ಭಾಗದಲ್ಲಿರುವ ಬೀಳೂರಿನಲ್ಲಿ ವಾಸವಾಗಿರುವ ಹವ್ಯಾಸಿ ಛಾಯಾಗ್ರಾಹಕಿ, ಮೂಲತಃ ಕೃಷಿಕ ಕುಟುಂಬದಿಂದ ಬೆಳೆದು ಬಂದವಳಾದ್ದರಿಂದ ಪ್ರಾಣಿ, ಪಕ್ಷಿ ಹಾಗು ಪರಿಸರದ ಬಗೆಗೆ ಬಹಳ ಆಸಕ್ತಿ, ಅಂತೆಯೇ ಪ್ರತಿದಿನ ಕ್ಯಾಮೆರಾ ಹಿಡಿದು ನಮ್ಮ ಮನೆಯ ಅಡಿಕೆ ತೋಟದಲ್ಲಿ ಒಂದು ಸುತ್ತು ಹಾಕಿ ಏನಾದರೂ ಅದ್ಭುತವಾದ ದೃಶ್ಯ ಸಿಕ್ಕರೆ ಸೆರೆ ಹಿಡಿಯುವುದು ಒಂದು ರೂಢಿ. ಹೀಗೆಯೇ ಒಂದು ದಿನ ಎಂದೂ ನೋಡಿರದ ಒಂದು ಅದ್ಭುತ ದೃಶ್ಯ ನನ್ನ ಕ್ಯಾಮೆರಾ ಕಣ್ಣಿಗಿ ಬಿತ್ತು. ಅಲ್ಲಿ ಎರಡು ಕೇರೆ ಹಾವುಗಳು ತಮ್ಮ ವಲಯ ನಿರ್ಧಾರಕ್ಕಾಗಿ ನೃತ್ಯದಲ್ಲಿ ಮಗ್ನವಾಗಿದ್ದವು.

ಕೇರೆ ಹಾವು (Indian Rat Snake) ವೇಗವಾಗಿ ಚಲಿಸುವ ಸರಿಸೃಪವಾಗಿದ್ದು, ಇದನ್ನು ವೈಜ್ಞಾನಿಕವಾಗಿ ಪಿಟ್ಯಾಸ್ ಮ್ಯೂಕೋಸಾ (*Ptyas mucosa)* ಎಂದು ಕರೆಯುತ್ತಾರೆ. ಇದು ಕೋಲಬ್ರಿಡೆ (Colubridae) ಗುಂಪಿಗೆ ಸೇರಿದೆ. ಇವುಗಳನ್ನು ಹೆಚ್ಚಾಗಿ ದಕ್ಷಿಣ ಏಷ್ಯಾ ಭಾಗಗಳಲ್ಲಿ ಕಾಣಬಹುದು. ಇದರ ದೇಹವು ಸುಮಾರು 2.5 ಮೀಟರ್ (8 ಅಡಿ) ನಷ್ಟು ಉದ್ದವಾಗಿರುತ್ತದೆ. ಇವುಗಳು ವಿಷಕಾರಿಯಲ್ಲದ ಹಾವುಗಳ ಗುಂಪಿಗೆ ಸೇರಿದ್ದು, ಸ್ವಭಾವತಹ ಆಕ್ರಮಣಕಾರಿಯಲ್ಲ, ಆದರೆ ಬೇರೆ ಜೀವಿಗಳಿಂದ ತೊಂದರೆಯಾದರೆ ಹೆಡೆಯನ್ನು ಎತ್ತಿ ಕಾಳಿಂಗ ಸರ್ಪ ಮತ್ತು ನಾಗರ ಹಾವಿನಂತೆ ಅನುಕರಣೆ ಮಾಡಿ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ. ಈ ವರ್ತನೆಯು ಸಾಮಾನ್ಯ ಜನರಲ್ಲಿ ವಿಷಕಾರಿ ಹಾವೆಂಬ ಗೊಂದಲವನ್ನು ಸೃಷ್ಟಿಸುತ್ತದೆ.

ಕೇರೆ ಹಾವುಗಳು ತಮ್ಮ ಸೀಳು ನಾಲಿಗೆಯ ಮೂಲಕ ವಾತಾವರಣದಲ್ಲಿನ ರಾಸಾಯನಿಕಗಳನ್ನು ಗ್ರಹಿಸುತ್ತವೆ. ಈ ಗ್ರಹಿಕೆಯಲ್ಲಿ ಮುಖ್ಯ ಪಾತ್ರವಹಿಸುವುದು "ಜಾಕೋಬ್ಸನ್" (Jacobson) ಅಂಗ. ಇದು ಹಾವುಗಳ ಮೂಗಿನ ಎರಡು ಹೊಳ್ಳೆಗಳ ನಡುವೆ ಇರುತ್ತದೆ. ಈ ಹಾವುಗಳು ತಮಗೆ ಆಹಾರವಾದ ಜೀವಿಗಳನ್ನು ಕೊಂದು ತಿನ್ನದೆ ಜೀವವಿದ್ದಂತೆ ಇಡಿಯಾಗಿ ನುಂಗಿ ತದನಂತರ ಜೀರ್ಣಿಸಿಕೊಳ್ಳುತ್ತವೆ. ಕೃಷಿ ಭೂಮಿಯಲ್ಲಿ ಬೆಳೆ ನಾಶಮಾಡುವ ಅನೇಕ ಬಗೆಯ ಕೀಟಗಳನ್ನು ಹಾಗೂ ದಂಶಕಗಳನ್ನು (ಇಲಿ, ಹೆಗ್ಗಣ) ತಿನ್ನುವುದರಿಂದ ಈ ಹಾವನ್ನು "ರೈತನ ಮಿತ್ರ" ಎಂದು ಕರೆಯುತ್ತಾರೆ. ಇವು ತಮ್ಮ ಜೀವಿತಾವಧಿಯಲ್ಲಿ ಸುಮಾರು 15000ಕ್ಕೂ ಹೆಚ್ಚು ಇಲಿಗಳನ್ನು ಸಾಯಿಸುತ್ತವೆ.

ಇವುಗಳು ತಮ್ಮ ಬೆಳವಣಿಗೆಗಾಗಿ ಹಾಗೂ ಚರ್ಮಕ್ಕೆ ಅಂಟಿದ ಇತರ ಪರಾವಲಂಬಿಗಳಿಂದ ದೇಹವನ್ನು ರಕ್ಷಿಸಿಕೊಳ್ಳಲು ಚರ್ಮವನ್ನು ಕಾಲಕಾಲಕ್ಕೆ ಕಳಚುತ್ತವೆ. ಈ ಕ್ರಿಯೆಯನ್ನು ಎಸಿಡಿಸಿಸ್, (Ecdysis) ಎನ್ನುತ್ತಾರೆ. ಹೊಸ ಚರ್ಮದ ಬೆಳವಣಿಗೆ ಪೂರ್ಣಗೊಂಡ ನಂತರ ಹಳೆಯ ಚರ್ಮವು ಕಳಚಿ ಬೀಳುತ್ತದೆ. ಈ ಕ್ರಿಯೆಯು ಪ್ರೌಢಾವಸ್ಥೆಯಲ್ಲಿರುವ ಹಾವಿನಲ್ಲಿ ವರ್ಷಕ್ಕೆ 2-3 ಬಾರಿ ಹಾಗು ಎಳೆಯ ಹಾವಿನಲ್ಲಿ ಪ್ರತಿ 3 ವಾರಗಳಿಗೊಮ್ಮೆ ನಡೆಯುತ್ತದೆ.

ಇವು ಸಾಮಾನ್ಯವಾಗಿ ವಸಂತ ಋತುವಿನ ಕೊನೆಯಿಂದ ಬೇಸಿಗೆಯ ಆರಂಭದ ಕಾಲದಲ್ಲಿ ತಮ್ಮ ಸಂತಾನೋತ್ಪತ್ತಿ ಕ್ರಿಯೆಯಲ್ಲಿ ತೊಡಗಿಕೊಳ್ಳುತ್ತವೆ. ನಂತರ ಮಾರ್ಚ್ ನಿಂದ ಸೆಪ್ಟೆಂಬರ್ ತಿಂಗಳ ಅವಧಿಯಲ್ಲಿ ಹೆಣ್ಣು ಹಾವು ಪ್ರತಿ ಕ್ಲಚ್ (Clutch) 8-20 ಮೊಟ್ಟೆಗಳನ್ನಿಟ್ಟು 60-80 ದಿನಗಳವರೆಗೆ ಕಾವು ಕೊಟ್ಟು ಕಾಪಾಡುತ್ತದೆ. ಸಂತಾನೋತ್ಪತ್ತಿ ಕಾಲ ಸಮೀಪಿಸಿದಾಗ ಗಂಡು ಕೇರೆ ಹಾವುಗಳು ತಮ್ಮ ವ್ಯಾಪ್ತಿಗಾಗಿ ಹೋರಾಟ ಮಾಡುತ್ತವೆ. ಇದನ್ನು Combat dance ಅಥವಾ Territory fight ಎಂದು ಕರೆಯುತ್ತಾರೆ.

ಮೊದಲು ಇದರ ಬಗ್ಗೆ ಕೇಳಿದ್ದೆ ಆದರೆ ಎಂದೂ ನೋಡಿರಲಿಲ್ಲ ಆದ್ದರಿಂದ ನನಗೆ ಇದೊಂದು ಅದ್ಭುತ ದೃಶ್ಯವಾಗಿತ್ತು. ಈ ಕ್ರಿಯೆಯಲ್ಲಿ ಎರಡು ಗಂಡು ಕೇರೆ ಹಾವುಗಳು ಹೆಣ್ಣು ಕೇರೆ ಹಾವು ತನ್ನ ದೇಹದಿಂದ ಹೊರಸೂಸುವ ಫೆರಮೋನನ್ನು (Pheramone - ಒಂದು ರಾಸಾಯನಿಕ ದ್ರವ್ಯ) ಹಿಂಬಾಲಿಸಿ ಬರುತ್ತವೆ. ಈ ಎರಡೂ ಗಂಡು ಹಾವುಗಳು ಹೆಣ್ಣನ್ನು ಒಲಿಸಿಕೊಳ್ಳಲು ಹೋರಾಟ ನಡೆಸುವಾಗ ತಮ್ಮ ದೇಹವನ್ನು ಒಂದಕ್ಕೊಂದು ಉಜ್ಜಿಕೊಳ್ಳುತ್ತ ಏಣಿಯಂತೆ ಸುತ್ತಿಕೊಳ್ಳುತ್ತವೆ. ಕೆಲವೊಮ್ಮೆ ತಮ್ಮ ಶಕ್ತಿಯನ್ನು ಪ್ರದರ್ಶಿಸುವ ಸಲುವಾಗಿ ಲಂಬವಾಗಿ ನಿಂತು ಒಂದು ಇನ್ನೊಂದನ್ನು ಕೆಳಕ್ಕೆ ಬೀಳಿಸಲು ಪ್ರಯತ್ನಿಸುತ್ತವೆ. ಒಂದು ಹಾವು ಇನ್ನೊಂದನ್ನು ಕೆಳಕ್ಕೆ ಬೀಳಿಸುವವರೆಗೆ ಅದು ನೆಲದಿಂದ 3-4 ಅಡಿಗಳಷ್ಟು ಎತ್ತರಕ್ಕೆ ನಿಂತಿರುತ್ತದೆ. ಇಲ್ಲಿ ಈ ಹೋರಾಟದಲ್ಲಿ ಗೆದ್ದ ಹಾವು ಹೆಣ್ಣನ್ನು ಒಲಿಸಿಕೊಳ್ಳುತ್ತದೆ. ಸೋತ ಹಾವು ತನ್ನ ದಾರಿ ಹಿಡಿದು ಹಿಂತಿರುಗುತ್ತದೆ. ಈ ದೃಶ್ಯವನ್ನು ನಾನು ಸುಮಾರು ಒಂದು ಗಂಟೆಗಳ ಕಾಲ ವೀಕ್ಷಿಸಿ ಅನೇಕ ಚಿತ್ರಗಳನ್ನು ಸೆರೆಹಿಡಿದೆ.

ಇದು ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ದೃಶ್ಯ ಇದನ್ನು ಹಾವು ಎಣೆ ಆಡುವುದು ಎಂದು ಕರೆಯುತ್ತಾರೆ. ಅನೇಕ ಜನರು ಇದನ್ನು ನಾಗರಹಾವು ಹಾಗು ಕೇರೆ ಹಾವಿನ ಸಂಭೋಗ ನೃತ್ಯ ಎಂಬ ತಪ್ಪು ಕಲ್ಪನೆಯನ್ನು ಹೊಂದಿದ್ದಾರೆ. ಅಲ್ಲದೆ ಇದನ್ನು ವೀಕ್ಷಿಸಿದರೆ ದೋಷ ಬರುತ್ತದೆಂಬ ಮೂಢನಂಬಿಕೆ ಇದೆ. ಆದರೆ ಇದೊಂದು ಪ್ರಕೃತಿಯಲ್ಲಿ ನಡೆಯುವ ಅಪರೂಪದ ದೃಶ್ಯ. ಪ್ರಕೃತಿಯಲ್ಲಿನ ಯಾವ ಜೀವಿಯೇ ಆಗಲಿ ನಾವು ತೊಂದರೆ ಕೊಡದೆ ಅವು ನಮಗೆ ಏನೂ ಮಾಡುವುದಿಲ್ಲ. ಆದ್ದರಿಂದ ಹಾವುಗಳಿಗೆ ಯಾವುದೇ ರೀತಿಯ ತೊಂದರೆ ಕೊಡದೆ ಈ ಅದ್ಭುತವನ್ನು ವೀಕ್ಷಿಸಿದರೆ ತಪ್ಪೇನಿಲ್ಲ.

ಲೇಖನ: ಸೌಮ್ಯ ಅಭಿನಂದನ್

ಶಿವಮೊಗ್ಗ ಜಿಲ್ಲೆ

ವೈಮಾನಿಕ ದಾಳಿಕೋರ ಪರಭಕ್ಷಕ ಕೀಟ
"ಸೀಳು ಕಣ್ಣಿನ ಗೂಬೆ ನೋಣ"

ಮಬ್ಬಾದ ಮುಂಜಾವು ಇನ್ನೂ ಸೂರ್ಯ ಉದಯಿಸಿರಲಿಲ್ಲ. ನಮ್ಮ ಮನೆಯ ಕೈತೋಟದಲ್ಲಿ ಒಣಗಿದ ಕಡ್ಡಿಯೊಂದರ ಮೇಲೆ ಕುಳಿತಿದ್ದ ಕೀಟವೊಂದು ನನಗೆ ಕಂಡಿತು. ದೂರದಿಂದ ನೋಡಿ ಏರೋಪ್ಲೇನ್ ಚಿಟ್ಟೆ ಇರಬೇಕು ಅಂದುಕೊಂಡೆ. ಹತ್ತಿರ ಹೋಗಿ ನೋಡಿದಾಗ ಅದು ಗೂಬೆ ನೊಣವಾಗಿತ್ತು. ಅದರ ಎರಡು ಕಣ್ಣುಗಳು ತುಂಬಾ ದೊಡ್ಡದಾಗಿದ್ದವು ಮತ್ತು ತಲೆಯ ಬಹುಭಾಗವನ್ನು ಆವರಿಸಿದ್ದವು, ಆದಾಗ್ಯೂ, ಪ್ರತಿಯೊಂದು ಸಂಯುಕ್ತ ಕಣ್ಣು ಎರಡು ಹಾಲೆಗಳಾಗಿ ವಿಭಜನೆಯಾಗಿರುವಂತೆ ತೋರುತ್ತಿತ್ತು, ನಾನು ಬೇರೆ ಯಾವುದೇ ಕೀಟದಲ್ಲಿ ಇದನ್ನು ನೋಡಿಲ್ಲ! ಬಹುಶಃ, ಈ ಕಣ್ಣುಗಳೇ ಈ ಕೀಟಕ್ಕೆ **"ಗೂಬೆ ನೊಣ"** ಎಂಬ ಹೆಸರು ಬರಲು ಕಾರಣವಿರಬೇಕು. ಈ ಹಿಂದೆ ಹನುಮನಮಟ್ಟಿ ಕೃಷಿ ವಿಜ್ಞಾನ ಕಾಲೇಜಿಗೆ ಹೋದಾಗ ಕೀಟ ವಿಜ್ಞಾನಿಗಳಾದ ಡಾ. ಎಸ್. ಟಿ. ಪ್ರಭುರವರು ಇದರ ಬಗ್ಗೆ ಹೇಳಿದ್ದರು. ಇದು ಕಾಣುವುದು ತುಸು ಅಪರೂಪವೇ. ತಕ್ಷಣವೇ ಮನೆ ಒಳಗೆ ಬಂದು ಕ್ಯಾಮೆರಾ ತೆಗೆದುಕೊಂಡು ಹೋಗಿ ಅದರ ಛಾಯಾಗ್ರಹಣವನ್ನು ಮಾಡಿಕೊಂಡೆ. ಅದರ ಮೀಸೆಗಳು ಕುಸ್ತಿ ಕಾಳಗದ ಜಟ್ಟಿಗಳಿಗಿರುವಂತೆ ಉದ್ದವಾಗಿ ತುದಿಯಲ್ಲಿ **ಮೂಡಿವೆ.** ಉಬ್ಬಿದ ವಿಭಜಿತ ಸಂಯುಕ್ತ ಕಣ್ಣುಗಳು ತುಂಬಾ ಆಕರ್ಷಕವಾಗಿ ಕಾಣುತ್ತವೆ. ಅವುಗಳ ದೊಡ್ಡ ವಿಭಜಿತ ಕಣ್ಣುಗಳು ಹಾಗೂ ಕೆಲ ಸಂಧ್ಯಾಕಾಲದ ನಡುವಳಿಕೆಗಳಿಂದ ಇವಕ್ಕೆ **"ಗೂಬೆ ನೊಣ"** ಎಂಬ ಹೆಸರು ಅನ್ವರ್ಥಕ. ಸುಮಾರು 450 ಪ್ರಭೇದಗಳು ಅಸ್ತಿತ್ವದಲ್ಲಿದ್ದು, ಅವುಗಳ ಪೈಕಿ ಇದು **"ಸೀಳು ಕಣ್ಣಿನ ಗೂಬೆ ನೊಣವಾಗಿತ್ತು.**

"ಸೀಳು ಕಣ್ಣಿನ ಗೂಬೆ ನೊಣ" ಗಳನ್ನು **"ಗೂಬೆ ನೊಣ"** ಎಂತಲೂ ಕರೆದು, ಇಂಗ್ಲೀಷಿನಲ್ಲಿ **"ಸ್ಪ್ಲಿಟ್ ಐಡ್ ಔಲ್ ಫ್ಲೈ"** (Split-eyed Owlfly) ಅಥವಾ "**ಔಲ್ ಫ್ಲೈ**" (Owlfly) ಎಂದು ಕರೆದು, ಸಂಧಿಪದಿಗಳ, ಕೀಟ (Insecta) ವರ್ಗದ, ನ್ಯೂರೋಪ್ಟೆರಾ (Neuroptera) ಗಣದ, ಅಸ್ಕಲಫಿಡೇ (Ascalaphidae) ಕುಟುಂಬಕ್ಕೆ ಸೇರಿಸಲಾಗಿದೆ.

ಎದೆಗೂಡಿನ ಭಾಗವು ಕಂದು ಬಣ್ಣದ ಕೂದಲಿನಿಂದ ಆವೃತವಾಗಿದ್ದು, ಬದಿಗಳಲ್ಲಿಯ ಕುಹರದ ಮೇಲ್ಮೈಯಲ್ಲಿ ಹಳದಿ ಗುರುತುಗಳನ್ನು ಹೊಂದಿವೆ ಮತ್ತು ಹಿಂಭಾಗದಲ್ಲಿ ಹಳದಿ ಪಟ್ಟೆ ಇದೆ. ತಲೆ ಹಳದಿ ಬಣ್ಣದ್ದಾಗಿದ್ದು, ಬಿಳಿ ಕೂದಲಿನಿಂದ ಆವೃತವಾಗಿದೆ, ಮೇಲ್ಭಾಗದಲ್ಲಿ ಕೆಲವು ಕಪ್ಪು ಕೂದಲುಗಳಿವೆ. ಗ್ರಹಣಾಂಗ (ಆಂಟೆನಾ)ಗಳು ತುಕ್ಕು ಕೆಂಪು ಬಣ್ಣದ್ದಾಗಿವೆ. ರೆಕ್ಕೆಗಳಷ್ಟು ಉದ್ದವಾಗಿರುವುದಿಲ್ಲ. ಉದ್ದವಾದ ಹೊಟ್ಟೆಯು ಕೇಸರಿ ಹಳದಿ ಬಣ್ಣದ್ದಾಗಿದ್ದು, ಹಿಂಭಾಗದಲ್ಲಿ ಎರಡು ಕಪ್ಪು ಪಟ್ಟೆಗಳು ಮತ್ತು ಬದಿಗಳಲ್ಲಿ ಹಲವಾರು ಕಪ್ಪು ಪಟ್ಟೆಗಳಿವೆ. ಕಾಲುಗಳು ಹಳದಿ ಬಣ್ಣದಲ್ಲಿರುತ್ತವೆ. ಹೆಣ್ಣು ಗೂಬೆ ನೊಣಗಳ ಯೋನಿಯು ಚಿಕ್ಕದಾಗಿದೆ ಮತ್ತು ಅಗಲವಾಗಿರುತ್ತದೆ.

ಇದರ ಪಾರದರ್ಶಕವಾದ ರೆಕ್ಕೆಗಳು ಬಹುನಾಳವ್ಯೂಹಗಳಿಂದ ಕೂಡಿವೆ. ಗೂಬೆ ನೊಣಗಳು ಇತರ ಕೀಟಗಳನ್ನು ವೈಮಾನಿಕವಾಗಿ ಹಿಡಿದು ತಿನ್ನುವ ಪರಭಕ್ಷಕಗಳಾಗಿವೆ. ಗಾಳಿಯಲ್ಲಿ ಹಾರಾಡುತ್ತಲೇ ಬೇಟೆಯಾಡುವ ಚತುರ ಕೀಟವಾಗಿದೆ. ತೊಂದರೆಗೊಳಗಾದಾಗ, ಕೆಲ ಜಾತಿಯ ಗೂಬೆ ನೊಣಗಳು ಶತ್ರುಗಳಿಂದ ತಪ್ಪಿಸಿಕೊಳ್ಳಲು **ಗಾಢವಾದ** ಕಸ್ತೂರಿಯಂತಹ ಸುವಾಸನಾಯುಕ್ತ ರಾಸಾಯನಿಕವನ್ನು ಬಿಡುಗಡೆ ಮಾಡುತ್ತವೆ. ಇನ್ನೂ ಕೆಲ ಪ್ರಭೇದವು ಸೂರ್ಯಾಸ್ತ ಮತ್ತು ಮುಂಜಾನೆ ಹೆಚ್ಚು ಚಟುವಟಿಕೆಯಿಂದ ಕೂಡಿರುತ್ತವೆ ಮತ್ತು ಮನೆಯಲ್ಲಿ ಉರಿಯುವ ಲೈಟು ಹಾಗೂ ದೀಪಗಳತ್ತ ಸುಳಿದಾಡುವುದು ಉಂಟು. ಹಗಲಿನಲ್ಲಿ, ದೇಹ, ಕಾಲುಗಳು ಮತ್ತು ಮೀಸೆಗಳನ್ನು ಸಸ್ಯಗಳ ಕಾಂಡಕ್ಕೆ ಒತ್ತಿ ಹಿಡಿದು ಕುಳಿತು ವಿಶ್ರಾಂತಿ ಪಡೆಯುತ್ತವೆ.

ಗ್ರೀಕ್ ಪುರಾಣದಲ್ಲಿ:

ವ್ಯುತ್ಪತ್ತಿ (Etymology)ಯಂತೆ **"ಅಸ್ಕಲಾಫಿಡೆ"** ಕುಟುಂಬವನ್ನು ಮೊದಲು 1842 ರಲ್ಲಿ ಫ್ರೆಂಚ್ ಕೀಟಶಾಸ್ತ್ರಜ್ಞ ಜೂಲ್ಸ್ ಪಿಯರೆ ರಾಂಬರ್ ವಿವರಿಸಿದರು. ಈ ಹೆಸರು ಗ್ರೀಕ್ ಅಸ್ಕಲಾಫೋಸ್, ಒಂದು ರೀತಿಯ ಗೂಬೆಯಿಂದ ಬಂದಿದೆ. ಗ್ರೀಕ್ ಪುರಾಣದಲ್ಲಿ, ಅಸ್ಕಲಾಫೋಸ್ ಭೂಗತ ಲೋಕದ ದೇವರು ಹೇಡಸ್‌ನ ಹಣ್ಣಿನ ತೋಟದ ಪಾಲಕನಾಗಿದ್ದನು, ದೇವತೆ ಡಿಮೀಟರ್ ಅವನನ್ನು ಗೂಬೆಯಾಗಿ ಪರಿವರ್ತಿಸಿದಳು ಎಂಬ ಮಾತಿದೆ.

ವೈಮಾನಿಕ ದಾಳಿಕೊರ:

ವಯಸ್ಕ ಗೂಬೆ ನೊಣಗಳು ವೇಗವಾಗಿ ಹಾರುವ, ವೈಮಾನಿಕ ಪರಭಕ್ಷಕಗಳಾಗಿದ್ದು, ಹಾರುವಾಗ ಇತರ ಕೀಟಗಳನ್ನು ಬೇಟೆಯಾಡಿ ತಿನ್ನುತ್ತವೆ. ಲಾರ್ವಾಗಳು ಸಹ ಪರಭಕ್ಷಕವಾಗಿದ್ದು, ನೈಸರ್ಗಿಕ ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳುವಲ್ಲಿ ಮತ್ತು ಪರಭಕ್ಷಕ ಕೀಟಗಳನ್ನು ನಿಯಂತ್ರಿಸುವಲ್ಲಿ ಈ ಗೂಬೆ ನೊಣಗಳು ಪ್ರಮುಖ ಪಾತ್ರವಹಿಸಿ ರೈತ ಮಿತ್ರ ಕೀಟಗಳಾಗಿವೆ.



ಲೇಖನ: ಶಶಿಧರಸ್ವಾಮಿ ಆರ್. ಹಿರೇಮಠ

ಹಾವೇರಿ ಜಿಲ್ಲೆ

ವನಬಂಧ–01



ಎಡದಿಂದ ಬಲಕ್ಕೆ:

1. 2010ರಲ್ಲಿ ಶುರುವಾದ ಕನ್ನಡದ ವನ್ಯ ವಿಜ್ಞಾನ ಕುರಿತಾದ ಇ-ಮಾಸಪತ್ರಿಕೆ (3)

2. "ಕಾಡಿನ ರೈತ" ಎಂದು ಕರೆಯಲ್ಪಡುವ, ಕೇರಳದ ರಾಜ್ಯ ಪಕ್ಷಿಯಿದು (3)

3. ಡೆಕ್ಕನ್ ಪ್ರಸ್ಥಭೂಮಿಯ ಅಂಚಿನಲ್ಲಿ 1600 ಕಿ. ಮೀ. ವಿಸ್ತರಿಸಿರುವ ಈ ಪರ್ವತಶ್ರೇಣಿಯು ಜಗತ್ತಿನ ಜೀವವೈವಿಧ್ಯ ಪ್ರದೇಶವೆಂದೂ ಗುರುತಿಸಲ್ಪಟ್ಟಿದೆ (5)

4. ಭಾರತದಲ್ಲಿ ಕಾಣಸಿಗುವ ಏಕೈಕ ಗಿಳಿ (Parrot) ಪ್ರಭೇದ (4)

5. ಗರುಡನ ಆಹಾರವಾದ ಸರ್ಪಗಳು, ಮನುಷ್ಯನನ್ನು ಕಚ್ಚಿದಾಗ ಔಷಧಿಯಾಗಿ ಉಪಯೋಗಿಸುವ 'ಸರ್ಪಗಂಧಿ' ಸಸ್ಯದ ಇನ್ನೊಂದು ಹೆಸರು (6)

6. ಮಳೆಗಾಲದಲ್ಲಿ ನೆಲದೊಳಗಿಂದ ಹೊರಬರುವ 'ನಾಯಿಕೊಡೆ'ಯಿದು (3)

7. ಚಿಕ್ಕಮಗಳೂರು ಜಿಲ್ಲೆಯ ಒಂದು ರಾಷ್ಟ್ರೀಯ ಉದ್ಯಾನವನ- 'ಕಬ್ಬಿಣದ ಅದಿರಿನ ತವರು' (5)

8. ನೈಸರ್ಗಿಕ 'ಮಾಲಿನ್ಯ ಸೂಚಕ'ಗಳೆಂದೇ ಕರೆಯುವ ಕಲ್ಲಿನ ಮೇಲೆಲ್ಲಾ ಬೆಳೆಯುವ ಜೀವಿ (4)

9. ಉತ್ತರಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಅಲ್ಲಿನ ಅಂಶಿ ರಾಷ್ಟ್ರೀಯ ಉದ್ಯಾನ ವನದೊಳಗೆ ಹರಿಯುವ ಜೀವನದಿ (4)

10. IUCN ಕೆಂಪು ಪಟ್ಟಿಯಲ್ಲಿರುವ ಇದು ಸಿಂಹವೂ ಅಲ್ಲ, ಕೋತಿಯೂ ಅಲ್ಲ (7)

11. ಇತ್ತೀಚೆಗೆ ನಗರ ಪ್ರದೇಶದಲ್ಲಿ ಪ್ರಚಲಿತದಲ್ಲಿರುವ ಜಪಾನ್ ಮೂಲದ ವೇಗವಾಗಿ ಕಾಡು ಬೆಳೆಸುವ ವಿಧಾನ (4)

12. ನಾವು ಬಾಲ್ಯದಲ್ಲಿ 'ಆ ಮರ'ದ ಕೊಂಬೆಯಿಂದ ನೇತಾಡುತ್ತಿದ್ದ ಬೇರಿನಲ್ಲಿ ಜೋಕಾಲಿ ಆಡಿದ ನೆನಪು (5)

13. ಕರ್ನಾಟಕದಲ್ಲಿರುವ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನ ವನದ ಫಲಕ ನಾನು ಬಲದಿಂದ ಎಡಕ್ಕೆ ಓದಿದಾಗ ಹೀಗಾಯ್ತು (5)

14. ವಿಶ್ವ ಪರಿಸರ ದಿನ ಈ ತಿಂಗಳಲ್ಲಿ ಆಚರಿಸಲಾಗುತ್ತದೆ (2)

ಮೇಲಿನಿಂದ ಕೆಳಕ್ಕೆ:

1. ಒಂದಾನೊಂದು ಕಾಲದಲ್ಲಿ ಅರಣ್ಯ ಇಲಾಖೆಗೆ ತಲೆನೋವಾಗಿದ್ದ ವೀರಪ್ಪನ್, ಆತನೊಬ್ಬ.! (4)

7. ಭಾರತದಲ್ಲಿ 1952ರ ನಂತರ ಅವನತಿ ಹೊಂದಿದ ಚೀತಾಗಳನ್ನು ಇತ್ತೀಚೆಗೆ ಆಫ್ರಿಕಾದಿಂದ ತಂದು, ಮರಳಿ ಈ ರಾಷ್ಟ್ರೀಯ ಉದ್ಯಾನವನಕ್ಕೆ ಪರಿಚಯಿಸಲಾಯಿತು (2)

9.ಇದು ಹಕ್ಕಿಗಳಂತೆ ಒಣ ಎಲೆಗಳಿಂದ ಗೂಡು ನಿರ್ಮಿಸಿ ಮೊಟ್ಟೆ ಇಡುವ ಜಗತ್ತಿನ ಅತ್ಯಂತ ಉದ್ದದ ವಿಷಪೂರಿತ ಹಾವು (5)

12. ನಾಲ್ಕು ಕಾಲುಗಳಿವೆ ಆನೆ ನಾನಲ್ಲ! ನೀರಲ್ಲಿರುವೆ ಮೀನು ನಾನಲ್ಲ! ದೀರ್ಘಾಯುಷ್ಯದ ವರ ಪಡೆದಿರುವೆ! ನಾನ್ಯಾರು? (2)

15. ಚಿಕ್ಕ ಹುಡುಗಿ ತಲೆ ಕೆಳಗೆ ಮಾಡಿಕುಳಿತಿರುವ ಕೀಟವೊಂದನ್ನು ಹಿಡಿಯಲು ಕಟ್ಟೆ ಹತ್ತಿದ್ದಾಳೆ! (2)

16. ಮಲೆನಾಡ ವಿವಿಧ ಮರದ ಮೇಲೆ ಅರಳುವ ಗುಲಾಬಿ ಬಣ್ಣ ಮಿಶ್ರಿತ ಈ ಆರ್ಕಿಡ್ ಹೂವನ್ನು ಶ್ರೀ ರಾಮನ ಸತಿ ಮುಡಿದಿದ್ದಾಳೆ (5)

17. ಮರವೊಂದನ್ನು ಕುಟ್ಟಿ ಕುಟ್ಟಿ ಹುಳಗಳನ್ನು ತಿನ್ನುತ್ತಿರುವ ಹಕ್ಕಿ (5)

18. ಕರ್ನಾಟಕದ ಚಿರಾಪುಂಜಿ (3)

19. ಮಕ್ಕಳಿಲ್ಲದ ಈಕೆ ಸಾಲು ಸಾಲು ಆಲದ ಸಸಿಯನ್ನು ನೆಟ್ಟು ನೂರಾರು ವೃಕ್ಷಗಳಿಗೆ ಮಾತೆ ಎನಿಸಿಕೊಂಡಿದ್ದಾಳೆ (7)

20. ಮೈಯೆಲ್ಲಾ ಮುಳ್ಳು ಹೊತ್ತು ತಿರುಗುವ ನಿಶಾಚರಿ ಸಸ್ಥನಿಯಿದು (4)

21. ಪ್ರಪಂಚದಲ್ಲೇ ಅತಿದೊಡ್ಡ ಜಲಚರ ಪ್ರಾಣಿ (4)

22. 'ಮಂಕುತಿಮ್ಮನ ಕಗ್ಗ' ಖ್ಯಾತಿಯ ಡಿ.ವಿ.ಜಿ. ಯವರ ಪುತ್ರ ಬಿ.ಜಿ.ಎಲ್. ಸ್ವಾಮಿಯವರ ಅತ್ಯಂತ ಪ್ರಸಿದ್ಧ ಸಸ್ಯಶಾಸ್ತ್ರ ಕುರಿತಾದ ಪುಸ್ತಕ (5)

23. ಕನ್ನಡನಾಡು- ನಾವಿರುವ ತಾಣ, ಈ 'ಮರ'ಗಳ ತವರು ಕಾಣ! (3)

24. ಆದಿಚುಂಚನಗಿರಿಯಲ್ಲಿರುವ ಪ್ರಸಿದ್ಧಧಾಮ (5)

25. ಇತ್ತೀಚೆಗೆ ನಿಧನ ಹೊಂದಿದ ಇಸ್ರೋದ ಪ್ರಖ್ಯಾತ ವಿಜ್ಞಾನಿ, ಪಶ್ಚಿಮ ಘಟ್ಟಗಳ ಉಳಿವಿಗಾಗಿ ಪಣತೊಟ್ಟ ಪರಿಸರ ಹೋರಾಟಗಾರ (6)

"ಈ ಮೇಲಿನ ವನಬಂಧವನ್ನು ಉತ್ತರಿಸಿ ನಮ್ಮ ವಿಳಾಸಕ್ಕೆ ಇದೇ ತಿಂಗಳ ದಿನಾಂಕ 20ರ ಒಳಗೆ ಕಳುಹಿಸಿ ಕೊಟ್ಟವರಿಗೆ ಪುಟ್ಟ ಬಹುಮಾನ ನೀಡಲಾಗುವುದು. (ವಿಳಾಸಕ್ಕಾಗಿ ನೀವೂ ಕಾನನಕ್ಕೆ ಬರೆಯಬಹುದು ಅಂಕಣವನ್ನು ಓದಿ)"

ವನಬಂಧ: ಅಕ್ಷತ ಹೆಚ್. ಕೆ.

ಚಿಕ್ಕಮಗಳೂರು ಜಿಲ್ಲೆ

ಜೈವಿಕ ಗಡಿಯಾರ ಬಲ್ಲಿರಾ?

ವಿವಿ ಅಂಕಣ

ಬೇಸಿಗೆ ರಜೆಯ ಮಜಾ ಮಾಡಲು ಬಂದು ಅದರ ಬಿಸಿಯಲ್ಲಿ ಬೆಂದು ಹೋದ ನೆನಪುಗಳೇ ಹೆಚ್ಚು ಈ ವರ್ಷ. ಆದರೆ ಈ ವರುಷದ ಬೇಗೆ ಹಿಂದಿನ ವರ್ಷದಷ್ಟು ಇಲ್ಲ ಬಿಡಿ. ಹಿಂದಿನ ವರ್ಷ ರಾಮ.. ರಾಮ.. ಕೇಳಬೇಡಿ. ಅಷ್ಟು ಬಿಸಿ. ನನ್ನ ಚಿಕ್ಕ ವಯಸ್ಸಿನಿಂದಲೂ ನೋಡದಂತಹ ಬಿಸಿ ಬಿಸಿ ಬೇಸಿಗೆ ಅದು. ಈ ವರ್ಷ ಹಿಂದೆ ಹೇಳಿದಂತೆ ಸ್ವಲ್ಪ ಕಡಿಮೆಯೇ. ಆದರೂ ಕೆಲಸದಲ್ಲಿರುವಾಗ ಇರುವ ನನ್ನ ನಿತ್ಯ ಸಾಮಾನ್ಯ ದಿನಚರಿಗೆ ಹೋಲಿಸಿದರೆ, ಈ ಬೇಸಿಗೆ ರಜೆಯ ದಿನಚರಿ ಸಂಪೂರ್ಣವಾಗಿ ಬೇರೆಯೇ; ಇಲ್ಲ-ಇಲ್ಲ ಖಚಿತವಾಗಿ ಹೇಳಬೇಕೆಂದರೆ ದಿನಚರಿಯೇ ಇರುವುದಿಲ್ಲ. ಏಕೆಂದರೆ ಬೆಳಿಗ್ಗೆ ಏಳುವುದು ರಾತ್ರಿ ಮಲಗುವ ಸಮಯದ ಮೇಲೆ ನಿಂತಿರುತ್ತದೆ. ತಿನ್ನುವ ಊಟ-ತಿಂಡಿಗಳು ಏಳುವ ಮತ್ತು ಮಲಗುವ ಸಮಯಗಳ ಮೇಲೇ ಅವಲಂಬಿತವಾಗಿರುತ್ತದೆ. ಹಾಗೆ ನೋಡಿದರೆ ನಾನು ಇವಾವುದನ್ನು ಸುಮಾರು 10 ದಿನಗಳ ಕಾಲ ನಿರ್ದಿಷ್ಟ ಸಮಯದಲ್ಲಿ ಮಾಡಲೇ ಇಲ್ಲ. ಅನಿಶ್ಚಿತ ದಿನಚರಿ ಜೊತೆಗೆ ತಿನ್ನುತ್ತಿದ್ದ ಆಹಾರ ಎಲ್ಲವೂ ಸೇರಿ ನನ್ನ ಮೇಲೆ ಸೇಡೇ ತೀರಿಸಿಕೊಂಡವು. ಹೇಗೆ ಎನ್ನುವಿರಾ? ರಜೆ ಇನ್ನೇನು ಮುಗಿಯುತ್ತಿದೆ ಅನ್ನುವಷ್ಟರಲ್ಲಿ ಅದು ನನ್ನ ದೇಹದ ಉಷ್ಣಾಂಶಗಳ ಮೇಲೆ ಪ್ರಭಾವ ಬೀರಿ, ಜೀರ್ಣ ಕ್ರಿಯೆಯ ಮೇಲೆ ಪ್ರಭಾವ ಬೀರಿ ಕೊನೆಗೆ ಒಂದೆರೆಡು ದಿನ ನಾನು ಸುಮ್ಮನೆ ಮನೆಯಲ್ಲಿ ಮಲಗಿರುವ ಹಾಗೆ ಮಾಡಿ ಬಿಟ್ಟಿತು. ಇದಕ್ಕೆ ಸಿಂಪಲ್ ಕಾರಣ ದೇಹದ ಉಷ್ಣ ಜಾಸ್ತಿ ಆಗಿ ಹೀಗೆ ಆಗಿದೆ ಎಂದು ನಾನೇ ಸಮರ್ಥಿಸಿಕೊಂಡರೂ, ಈ ಲೇಖನಕ್ಕೆ ಇಂಗ್ಲಿಷ್ ಲೇಖನ ಓದುತ್ತಾ ತಿಳಿಯಿತು ಅದಕ್ಕೆ ಮೂಲ ಕಾರಣ, ಅದು ನನ್ನ ದೇಹದ 'ಜೈವಿಕ ಗಡಿಯಾರ'ದ ಬದಲಾವಣೆಯಿಂದ ಆದ ಅಚಾತುರ್ಯ ಎಂದು.

ನಿಮ್ಮಲ್ಲಿ ಕೆಲವರಿಗೆ ತಿಳಿದಿರುವಂತೆ, ಜೈವಿಕ ಗಡಿಯಾರ ಅಥವಾ ಬಾಡಿ ಕ್ಲಾಕ್ ಎಂದು ಕರೆಯಲ್ಪಡುವ ಒಂದು ಪ್ರಕ್ರಿಯೆ ನಮ್ಮ ದೇಹದಲ್ಲಿ ಇರುತ್ತದೆ. ಅಂದರೆ ನಾವು ಬೆಳಿಗ್ಗೆ ಸಾಮಾನ್ಯವಾಗಿ ಏಳುವ ಸಮಯ, ಊಟ ತಿಂಡಿಗಳನ್ನು ಮಾಡುವ ಸಮಯ, ಮಲಗುವ ಸಮಯ, ನಿದ್ದೆ ಮಾಡುವ ಒಟ್ಟು ಸಮಯ. ಒಬ್ಬ ಸಾಮಾನ್ಯ ಮನುಷ್ಯನಲ್ಲಿ ಇವುಗಳು ಸಾಮಾನ್ಯವಾಗಿ ಒಂದು ದಿನಚರಿಯಂತೆ ಇರುತ್ತವೆ. ಇದನ್ನು ನಾವೇನಾದರೂ ಕಾರಾಣಾಂತರಗಳಿಂದ ಬದಲಾಯಿಸಿದರೆ, ನಮ್ಮ ದೇಹದ ಮೇಲೆ ಅತಿಯಾದ ಪರಿಣಾಮ ಬೀರುತ್ತದೆ. ಅರೇ... ಇದು ನಮಗೂ ತಿಳಿದಿದೆಯಲ್ಲಾ.. ಇದರಲ್ಲಿ ಹೊಸತೇನಿದೆ? ಎಂದು ಹೇಳುವುದಾದರೆ ಇಲ್ಲಿ ಕೇಳಿ, ಸಾಮನ್ಯವಾಗಿ ನಮ್ಮ ದೇಹದ ಜೈವಿಕ ಗಡಿಯಾರದ ಸಮಯ ಬದಲಾದರೆ ಅದು ನಮ್ಮ ಮನಸ್ಥಿತಿ ಹಾಗೂ ನಮ್ಮ ಆಹಾರ ಸೇವಿಸುವ ಸಮಯದ ಮೇಲೆ ಅಥವಾ ಹೊಟ್ಟೆ ಹಸಿಯುವ ಸಮಯಗಳು ಬದಲಾಗಬಹುದು ಅಂದುಕೊಳ್ಳುತ್ತೇವೆ. ಅದು ನಿಜವೇ. ಈ ವಿಚಾರವಾಗಿ ಮಾನವಶಾಸ್ತ್ರಜ್ಞ ಡೇವಿಡ್ ಸ್ಯಾಂಸನ್ ಹೇಳುವುದೇನೆಂದರೆ, ನಮ್ಮ ಪೂರ್ವಜರ ಕಾಲದಿಂದಲೂ ನಡೆದು ಬಂದ ಒಂದು ವಿಷಯವೆಂದರೆ ಅದು, ಬೆಳಿಗ್ಗೆ ಸೂರ್ಯನಿರುವಾಗ ಕೆಲಸ ಮತ್ತು ಸಂಜೆ ನಕ್ಷತ್ರಗಳ ಕೆಳಗೆ ನಿದ್ದೆ. ಆದರೆ ಈ ನವಯುಗದ ಬೆಳವಣಿಗೆಯಲ್ಲಿ ನಮ್ಮ ಜೈವಿಕ ಗಡಿಯಾರ ದಿಕ್ಕು ದೆಸೆಯಿಲ್ಲದೆ ತಿರುಗುತ್ತಿದೆ. ಕಾರಣ ಬದಲಾದ ಕೆಲಸಗಳ ವೈಖರಿ (ಡೇ–ನೈಟ್ ಶಿಫ್ಟ್), ಬೇರೆ ಬೇರೆ ಟೈಮ್ ಜೋನ್ನಳ ಪ್ರವಾಸ, ವಿದ್ಯುತ್ ಬಂದ ಮೇಲೆ ಬದಲಾದ ದಿನಚರಿಗಳು. ಹೀಗೆ ಹತ್ತು ಹಲವಾರು ಕಾರಣಗಳಿಂದ ನಮ್ಮ ದೇಹದ ಜೈವಿಕ ಗಡಿಯಾರ ಬದಲಾಗಿ ನಮ್ಮ ದೇಹದ ಮೇಲೆ ತೀವ್ರವಾಗೆ ಪ್ರತಿಕ್ರಿಯಿಸುತ್ತಿವೆ. ಹೇಗೆ ಎಂದಿರೇನು..? ನಮ್ಮ ದೇಹದಲ್ಲಿ ಉತ್ಪತ್ತಿ ಆಗುವ ನಮ್ಮ ದೇಹದ ಆರೋಗ್ಯಕರ ಕ್ರಿಯೆಗೆ ಅತಿ ಮುಖ್ಯವಾದ ಹಾರ್ಮೋನ್ ಗಳ ಉತ್ಪತ್ತಿಯಲ್ಲಾಗುವ ಬದಲಾವಣೆ. ಅದು ಇಡೀ ದೇಹದ ಮೇಲೆ ಪರಿಣಾಮ ಬೀರಬಲ್ಲದು. ಇದು ಮಾನಸಿಕ ಖಿನ್ನತೆ, ಕ್ಯಾನ್ಸರ್ ಹಾಗೂ ಹೃದಯ ಸಂಬಂಧಿ ರೋಗಗಳಿಗೂ ಕಾರಣವಾಗಿದೆ ಎನ್ನುತ್ತಾರೆ.



ಸ್ಯಾಮ್ಸನ್ ಅವರು 1967 ರಿಂದ 2022 ಸಮಯದಲ್ಲಿ ಸುಮಾರು 21 ದೇಶಗಳ 51,000 ಜನರ ಮೇಲೆ ನಡೆಸಿದ 54 ವಿಧದ ನಿದ್ದೆಯ ಪ್ರಯೋಗದ ಮಾಹಿತಿಯನ್ನು ಗಮನಿಸಿದಾಗ ಅವರಿಗೆ ತಿಳಿದದ್ದು, ನಾವು ಎಷ್ಟು ಸಮಯ ನಿದ್ರಿಸುತ್ತೇವೆ ಎನ್ನುವುದಕ್ಕಿಂತ, ಮಲಗುವ ಸಮಯ ಹಾಗೂ ಏಳುವ ಸಮಯ ಮುಖ್ಯವೆನ್ನುತ್ತಾರೆ. ಅದರಲ್ಲಿದ್ದ ಮಾಹಿತಿಯ ಪ್ರಕಾರ ಕೈಗಾರಿಕಾ ವೃತ್ತಿಯಲ್ಲಿ ತೊಡಗಿದ್ದ ಜನ ಸರಾಸರಿ 7.1 ಘಂಟೆಗಳ ಕಾಲ ನಿದ್ದೆ ಮಾಡುತ್ತಾರೆ. ವಿದ್ಯುತ್ ಇಲ್ಲದ ಕೈಗಾರಿಕ ವೃತ್ತಿಯಲ್ಲಿ ಕೆಲಸದಲ್ಲಿರದ ಜನ ಸರಾಸರಿ 6.4 ಘಂಟೆಗಳ ಕಾಲ ನಿದ್ರಿಸುತ್ತಾರೆ. ಇವರು ಹೋಲಿಕೆಯಲ್ಲಿ 42 ನಿಮಿಷಗಳ ಕಾಲ ಕಡಿಮೆ ನಿದ್ದೆ ಮಾಡಿದರೂ ಇವರ ಜೈವಿಕ ಗಡಿಯಾರ ಸೂರ್ಯನಿಗೆ ಹೊಂದಾಣಿಕೆ ಆಗುವುದರಿಂದ ಹೆಚ್ಚು ಆರೋಗ್ಯಕರವಾಗಿ ಇರುವರು ಎಂದು ಇವರ ವಾದವಾದರೆ, ನರಶಾಸ್ತ್ರಜ್ಞ ಹೊರಾಸಿಯೋ ಇದನ್ನು ಒಪ್ಪುವುದಿಲ್ಲ. ಅವರು ಹೇಳುವ ಹಾಗೆ ನಾವು ನಿದ್ದೆ ಮಾಡುವ ಸಮಯ ಮತ್ತು ನಮ್ಮ ಜೈವಿಕ ಗಡಿಯಾರಕ್ಕೆ ಸೂಕ್ಷ್ಮ ಸಂಬಂಧ ಇರುವುದಾದರೂ ಅದು ವಾತಾವರಣ ಹಾಗೂ ಕೆಲಸ ಮಾಡುವ ಜೀವನ ಶೈಲಿಗೆ ತಕ್ಕಂತೆ ಸ್ವಲ್ಪ ವ್ಯತ್ಯಾಸವಿರುತ್ತದೆ. ಹಾಗಾಗಿ ಒಂದು ನಿರ್ದಿಷ್ಟ ಸಮಯ ಕೆಲಸಕ್ಕೆ ಹಾಗೂ ನಿದ್ದೆಗೆ ಇಡುವುದು ಒಳಿತಾದರೂ, ನಿದ್ದೆ ಮಾಡುವ ಸಮಯ ಕಡಿಮೆ ಆಗಬಾರದು, ಉದಾಹರಣೆಗೆ ರಾತ್ರಿ 1.00 ಘಂಟೆಯವರೆಗೆ ಕೆಲಸ ಮಾಡುವ ಕೆಲಸಗಾರನಿಗೆ 8 ಘಂಟೆಗಳ ನಂತರ ಏಳುವ ಅವಕಾಶವಿರಬೇಕು. ಹಾಗೂ ಮಲಗುವ ಜಾಗದಲ್ಲಿನ ಬೆಳಕು ಹಾಗೂ ಉಷ್ಣಾಂಶಗಳು ಬೆಳಗಿನ ಮತ್ತು ರಾತ್ರಿ ಸಮಯಗಳನ್ನು ಹೋಲುವ ಹಾಗೆ ಇರಬೇಕು. ಅಂದರೆ ಬೆಚ್ಚಗಿನ ಹಾಗೂ ನೀಲಿ ಮಿಶ್ರಿತ ವಾತಾವರಣ ಬೆಳಗಿನ ಸಮಯದಲ್ಲಿ; ತಣ್ಣಗಿನ ಕೆಂಪು ಮಿಶ್ರಿತ ಮಂದ ಬೆಳಕಿನ ವಾತಾವರಣ ರಾತ್ರಿಯಲ್ಲಿ ಇರಬೇಕು.

ಸ್ವಾಭಾವಿಕವಾಗಿ ನಮ್ಮ ದೇಹವೂ ಸಹ ನಮ್ಮ ಸಾವಿರಾರು ವರುಷಗಳ ಹಿಂದಿನ ಪೀಳಿಗೆಯ ಪೂರ್ವಜರ ಹಾಗೆ ಸಾಮಾನ್ಯ ಜೈವಿಕ ಗಡಿಯಾರವನ್ನು ಹೊಂದಿರುವೆವಾದರೂ, ಕಾರಾಣಾಂತರಗಳಿಂದ ಅದನ್ನು ಮನಸೋ ಇಚ್ಛೆ ತಿಳಿದೋ – ತಿಳಿಯದೆಯೋ ಬಹುತೇಕ ಬದಲಾಯಿಸಿಕೊಂಡಿದ್ದೇವೆ. ಈ ವಿಚಾರಗಳು ತಿಳಿದ ನಂತರವಾದರೂ ಅದನ್ನು ಬದಲಿಸುವಲ್ಲಿ ನಾವು ಒಲವು ತೋರದಿದ್ದರೆ ಆಗುವ ಪರಿಣಾಮ ನಮ್ಮ ಪಕ್ಕದವರಿಗಲ್ಲ, ನಮಗೆ ಮರೆಯದಿರಿ!

ಏನೇ ಆದರೂ ನಾವು ಮಾಡುವ ಕೆಲಸ, ಪಡುವ ಶ್ರಮ, ಗಿಟ್ಟಿಸಿಕೊಳ್ಳುವ ಸಂಬಳ ಏತಕ್ಕಾಗಿ? ನಮ್ಮ ತನು-ಮನ ಆರೋಗ್ಯ ಹಿತಕ್ಕಾಗಿಯೇ ಅಲ್ಲವೇ? ಅದನ್ನೇ ಒತ್ತೆ ಇಟ್ಟು ಮಾಡಿಕೊಳ್ಳುವ ದಿನಚರಿ ಯಾವ ಪ್ರಯೋಜನಕ್ಕೆ?

ಲೇಖನ: ಜೈಕುಮಾರ್ ಆರ್.
ಡಬ್ಲ್ಯೂ. ಸಿ. ಜಿ. ಬೆಂಗಳೂರು ನಗರ ಜಿಲ್ಲೆ

Source: www.snexplores.org

ಬೆಳೆಸುವ ಹಸಿರು

ಹಸಿರಿನ ವನಗಳ ಬೆಳೆಸುತ ನಾವು
ಉಸಿರನು ತುಂಬುವ ಜಗದಲ್ಲಿ
ಬಿಸಿಯನು ಸೂಸಿದೆ ಪರಿಸರ ಎಲ್ಲೆಡೆ
ಕುಸಿದಿದೆ ಶುದ್ಧತೆ ನೋಡಿಲ್ಲಿ

ಜಲವನು ವ್ಯಯಿಸದೆ ಮಿತದಲಿ ಬಳಸುವ
ಹೊಲಸನು ತೂರದೆ ನದಿಗಳಿಗೆ
ಮಲಿನವ ಮಾಡದೆ ಶರಧಿಯ ಒಡಲನು
ಒಲವನು ತೋರುವ ಈ ಇಳೆಗೆ

ಕಾನನ ಕಡಿಯದೆ ಗಿಡಗಳ ನೆಡುತಲಿ
ಗಾನವ ಪಾಡುವ ಧರೆಯಲ್ಲಿ
ಜೇನಿನ ಸವಿಯಿದೆ ಹಸಿರನು ಕಾಯ್ದರೆ
ಬೇನೆಯು ಬವಣೆಯು ನಮಗಿಲ್ಲ

ಬೀಸುವ ಗಾಳಿಗೆ ಧೂಮವ ಬೆರಸದೆ
ಸೂಸುವ ಗಂಧವ ಸುತ್ತಲಲಿ
ಮಾಸದೆ ಉಳಿಸುವ ಹಸಿರಿನ ಸಿರಿಯನು
ಹಾಸುತ ಬಂಧುರ ಭಾವದಲಿ

- ಶುಭಲಕ್ಷ್ಮಿ ಆರ್. ನಾಯಕ
ಉಡುಪಿ ಜಿಲ್ಲೆ

© ಧನರಾಜ್ ಎಂ.

ಪ್ರಕೃತಿ ಬಿಂಬ

ಬೆಡ್ಡೋಮಿ ಬೆನ್ನೆಣುಹಾವು © ಗಿರೀಶ್ ಗೌಡ

ಭಾರತದ ನೀಲಗಿರಿ ಬೆಟ್ಟಗಳ ಮಳೆಕಾಡುಗಳು ಮತ್ತು ತೇವಾಂಶವುಳ್ಳ ಕಾಡುಗಳಲ್ಲಿ ಕಂಡುಬರುವ ಈ ಹಾವು ಕೊಲುಬ್ರಿಡೇ (Colubridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಸಹ್ಯಾದ್ರಿಯೋಫಿಸ್ ಬೆಡ್ಡೋಮಿ (Sahyadriophis beddomei) ಎಂದು ಕರೆಯಲಾಗುತ್ತದೆ. ಇದು ಸುಮಾರು 51-66 ಸೆಂಟಿ ಮೀಟರ್ ಉದ್ದವಿದ್ದು, 13-19 ಸೆಂಟಿ ಮೀಟರ್ ಬಾಲವನ್ನು ಹೊಂದಿದೆ. ಮಧ್ಯಮ ಗಾತ್ರದ ಈ ಹಾವಿನ ದೇಹವು ಕಂದು ಬಣ್ಣದಲ್ಲಿದ್ದು, ಒರಟಾದ ಹುರುಪೆಗಳನ್ನು ಹೊಂದಿದೆ. ಹಿಂಭಾಗದ ಪ್ರತಿ ಬದಿಯಲ್ಲಿ ಎರಡು ಕಪ್ಪು ಚುಕ್ಕೆಗಳು ಅಥವಾ ಸಣ್ಣ ಅಡ್ಡ ಪಟ್ಟಿಗಳ ನಡುವೆ ಹಳದಿ ಚುಕ್ಕೆಗಳ ಸರಣಿ ಇರುತ್ತದೆ. ಹೊಟ್ಟೆ ಬೆಳ್ಳಗಿದ್ದು, ಬದಿಗಳಲ್ಲಿ ಕಂದು ಚುಕ್ಕೆಗಳನ್ನು ಹೊಂದಿರುತ್ತದೆ. ಮುಂಜಾನೆಯಿಂದ ಸಂಜೆಯವರೆಗೆ ಹೊಳೆಯ ದಡಗಳಲ್ಲಿ ಅಥವಾ ಇತರೆ ಜಲಮೂಲಗಳ ಬಳಿ ಬೇಟೆಯಾಡುವುದನ್ನು ಕಾಣಬಹುದು. ಕಪ್ಪೆಗಳು ಇವುಗಳ ಪ್ರಮುಖ ಆಹಾರವಾಗಿವೆ. ಹೆಣ್ಣು ಹಾವು 5-10 ಮೊಟ್ಟೆಗಳನ್ನು ರಂಧ್ರಗಳಲ್ಲಿ ಅಥವಾ ಬಿಲಗಳಲ್ಲಿ ಇಡುತ್ತದೆ.

ಸಾಮಾನ್ಯ ಬೆಕ್ಕಿನ ಹಾವು © ಗಿರೀಶ್ ಗೌಡ

ದಕ್ಷಿಣ ಏಷ್ಯಾದ ದಟ್ಟವಾದ ಕಾಡುಗಳು, ಕುರುಚಲು ಕಾಡುಗಳು, ಕಲ್ಲಿನ ಬೆಟ್ಟಗಳು ಮತ್ತು ಕರಾವಳಿ ಕಾಡುಗಳಿಗೆ ಸ್ಥಳೀಯವಾಗಿರುವ ಸಾಮಾನ್ಯ ಬೆಕ್ಕಿನ ಹಾವು ಕೊಲುಬ್ರಿಡೇ (Colubridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಬೋಯ್ಗಾ ಟ್ರಿಗೊನಾಟಾ (Boiga trigonata) ಎಂದು ಕರೆಯಲಾಗುತ್ತದೆ. ಇದು ಸುಮಾರು 3 ಅಡಿ (91 ಸೆಂಟಿ ಮೀಟರ್) ಉದ್ದವಿದ್ದು, 7-ಇಂಚಿನ (18 ಸೆಂಟಿ ಮೀಟರ್) ಬಾಲವನ್ನು ಹೊಂದಿದೆ. ದೇಹದ ಮೇಲ್ಭಾಗವು ಬೂದು ಮಿಶ್ರಿತ ಕಂದು ಬಣ್ಣದ್ದಾಗಿದ್ದು, ಕಪ್ಪು ಬಣ್ಣದ ಅಂಚಿನಿಂದ ಸುತ್ತುವರಿದ ಕೆನೆ ಬಣ್ಣದ ಅನಿಯಮಿತ ಗುರುತುಗಳನ್ನು ಹೊಂದಿದೆ. ಇದರ ಕೆಳಭಾಗವು ಹಳದಿ-ಬಿಳಿ ಅಥವಾ ಹಳದಿ-ಕಂದು ಬಣ್ಣದ್ದಾಗಿದೆ. ದೊಡ್ಡದಾದ ತಲೆಯು ತ್ರಿಕೋನಾಕಾರದಲ್ಲಿದ್ದು, ಕುತ್ತಿಗೆಗಿಂತ ಅಗಲವಾಗಿರುತ್ತದೆ. ದೇಹದ ಮೇಲೆ "Y" ಆಕಾರದ ಗುರುತುಗಳನ್ನು ಹೊಂದಿರುವುದರಿಂದ ತ್ವರಿತವಾಗಿ ಗುರುತಿಸಲು ಸಹಾಯಕವಾಗುತ್ತದೆ. ಇದು ಸ್ವಲ್ಪ ಮಟ್ಟಿಗೆ ವಿಷಕಾರಿಯಾಗಿದ್ದರೂ ಮನುಷ್ಯರಿಗೆ ಅಪಾಯಕಾರಿಯಲ್ಲ. ಹಲ್ಲಿಗಳು, ಸಣ್ಣ ಪಕ್ಷಿಗಳು ಮತ್ತು ಕಪ್ಪೆಗಳನ್ನು ತಿನ್ನುತ್ತವೆ. ಹೆಣ್ಣು ಹಾವು 3-10 ಮೊಟ್ಟೆಗಳನ್ನು ರಂಧ್ರಗಳಲ್ಲಿ ಮತ್ತು ಬಂಡೆಗಳ ಕೆಳಗೆ ಇಡುತ್ತದೆ.

ಸಾಮಾನ್ಯ ತೋಳದ ಹಾವು © ಗಿರೀಶ್ ಗೌಡ

ಭಾರತೀಯ ಉಪಖಂಡ ಮತ್ತು ಏಷ್ಯಾದ ವಿವಿಧ ಪ್ರದೇಶಗಳ ಕಾಡುಗಳು, ಕಲ್ಲಿನ ಭೂಪ್ರದೇಶ ಮತ್ತು ಮಾನವರಿರುವ ಸ್ಥಳಗಳಲ್ಲಿ ಕಂಡುಬರುವ ಈ ಹಾವು ಕೊಲುಬ್ರಿಡೇ (Colubridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಲೈಕೊಡಾನ್ ಕ್ಯಾಪುಸಿನಸ್ (Lycodon capucinus) ಎಂದು ಕರೆಯಲಾಗುತ್ತದೆ. ವಿಷಕಾರಿಯಲ್ಲದ ಈ ಹಾವು ತೋಳದ ಹಲ್ಲುಗಳನ್ನು ಹೋಲುವ ಉದ್ದವಾದ, ಚೂಪಾದ ಮುಂಭಾಗದ ಹಲ್ಲುಗಳಿಂದ ಈ ಹೆಸರನ್ನು ಪಡೆದುಕೊಂಡಿದೆ. ಸಣ್ಣದಾದ ತೆಳು ದೇಹವನ್ನು ಹೊಂದಿರುವ ಈ ಹಾವು ಸುಮಾರು 76 ಸೆಂಟಿ ಮೀಟರ್ ಉದ್ದವಿರುತ್ತದೆ. ದೇಹವು ಬೂದು ಮಿಶ್ರಿತ ಕಂದು ಅಥವಾ ಕಪ್ಪು ಬಣ್ಣದಲ್ಲಿದ್ದು ದಪ್ಪದಾದ ಬಿಳಿ ಅಥವಾ ಹಳದಿ ಬಣ್ಣದ ಪಟ್ಟೆಗಳನ್ನು ಹೊಂದಿರುತ್ತದೆ. ಅಗಲವಾದ ಮತ್ತು ಚಪ್ಪಟೆಯಾದ ತಲೆಯನ್ನು ಹೊಂದಿರುತ್ತದೆ. ಮನೆಗಳ ಬಿರುಕುಗಳು, ದೊಡ್ಡ ಬಂಡೆಗಳು ಹಾಗೂ ತೊಗಟೆಗಳ ಕೆಳಗೆ ಸುರಕ್ಷಿತ ಸ್ಥಳಗಳಲ್ಲಿ ಅಡಗಿಕೊಳ್ಳುತ್ತವೆ. ಇವುಗಳು ಹಲ್ಲಿ, ಕಪ್ಪೆ ಮತ್ತು ಇಲಿಗಳನ್ನು ಬೇಟೆಯಾಡುತ್ತವೆ. ಹೆಣ್ಣು ಹಾವು 3-10 ಮೊಟ್ಟೆಗಳನ್ನು ರಂಧ್ರಗಳಲ್ಲಿ, ಬಂಡೆಗಳ ಬಿರುಕುಗಳಲ್ಲಿ ಅಥವಾ ಒಣ ಎಲೆಗಳ ಕೆಳಗೆ ಇಡುತ್ತದೆ.

ಹಳದಿ-ಹಸಿರು ಬೆಕ್ಕಿನ ಹಾವು © ಗಿರೀಶ್ ಗೌಡ

ಭಾರತದ ಪರ್ಯಾಯ ದ್ವೀಪದ ವಿವಿಧ ಪ್ರದೇಶಗಳಿಗೆ ಸ್ಥಳೀಯವಾಗಿರುವ ಈ ಹಾವುಗಳು ಒಣ ಮತ್ತು ಕುರುಚಲು ಕಾಡುಗಳಲ್ಲಿ ಕಾಣಸಿಗುತ್ತವೆ. ಕೊಲುಬ್ರಿಡೇ (Colubridae) ಕುಟುಂಬಕ್ಕೆ ಸೇರುವ ಇದನ್ನು ವೈಜ್ಞಾನಿಕವಾಗಿ ಬೊಯ್ಗಾ ಫ್ಲೇವಿವಿರಿಡಿಸ್ (Boiga flaviviridis) ಎಂದು ಕರೆಯಲಾಗುತ್ತದೆ. ಸ್ವಲ್ಪ ಮಟ್ಟಿಗೆ ವಿಷಕಾರಿಯಾಗಿರುವ ಮಧ್ಯಮ ಗಾತ್ರದ ಈ ಹಾವಿನ ದೇಹವು, ಹಳದಿ ಮಿಶ್ರಿತ ಹಸಿರು ಬಣ್ಣದಲ್ಲಿದ್ದು, 70-100 ಸೆಂಟಿ ಮೀಟರ್ ಉದ್ದವಿರುತ್ತದೆ. ಮಸುಕಾದ ಕಪ್ಪು ಪಟ್ಟೆಗಳನ್ನು ಹೊಂದಿರುತ್ತದೆ. ಕೆಳಭಾಗವು ಹಳದಿ-ಬಿಳಿ ಬಣ್ಣದ್ದಾಗಿದ್ದು, ತಲೆ ತ್ರಿಕೋನಾಕಾರದಲ್ಲಿರುತ್ತದೆ. ಲಂಬವಾದ ದೊಡ್ಡ, ಹಸಿರು ಮಿಶ್ರಿತ ಹಳದಿ ಕಣ್ಣುಗಳನ್ನು ಹೊಂದಿರುತ್ತವೆ. ರಾತ್ರಿ ವೇಳೆ ಹಲ್ಲಿ, ಇಲಿಗಳು ಮತ್ತು ಕಪ್ಪೆಗಳನ್ನು ಬೇಟೆಯಾಡುತ್ತವೆ. ಹೆಣ್ಣು ಹಾವು 3-12 ಮೊಟ್ಟೆಗಳನ್ನು ಮರದ ಪೊಟರೆಗಳಲ್ಲಿ, ಇತರೆ ಬಿರುಕುಗಳಲ್ಲಿ ಇಡುತ್ತದೆ.

ಚಿತ್ರ: ಗಿರೀಶ್ ಗೌಡ

ಲೇಖನ: ದೀಪ್ತಿ ಎನ್.

ನೀವೂ ಕಾನನಕ್ಕೆ ಬರೆಯಬಹುದು

ತುಂಬಾ ಸೂಕ್ಷ್ಮವಾಗಿ ಗಮನಿಸಿದರೆ ಚಿಂಪಾಂಜಿಗಳಲ್ಲಿ ಮನುಷ್ಯರನ್ನು ಹೋಲುವ ಲಕ್ಷಣಗಳು ಬಹಳ ಇವೆ. ಶತ್ರುಗಳನ್ನು ಬೆದರಿಸಲು ಚಿಂಪಾಂಜಿಗಳು ಕಲ್ಲುಗಳನ್ನು ಎಸೆಯುತ್ತವೆ; ಕೋಲು ಹಿಡಿದು ಅಟ್ಟಿಸುತ್ತವೆ. ಗಟ್ಟಿ ಕಾಯಿಗಳೊಳಗಿನ ಬೀಜ ಬಿಡಿಸಲು ಚಿಂಪಾಂಜಿಗಳು ಕಲ್ಲಿನಿಂದ ಕುಟ್ಟುತ್ತವೆ. ಹುತ್ತದೊಳಗಿನ ಗೆದ್ದಲುಗಳಿಗೆ ಉದ್ದದ ಕಡ್ಡಿಯ ಗಾಳ ಹಾಕಿ ಹಿಡಿದು ತಿನ್ನುತ್ತವೆ. ಚಿಂಪಾಂಜಿಗಳು ವಾಸ್ತವವಾಗಿ ಮಿಶ್ರಾಹಾರಿಗಳು. ಆದರೂ ಅವುಗಳು ಮುಖ್ಯವಾಗಿ ಸೊಪ್ಪುಗಳು, ಹೂವುಗಳು, ಕಾಯಿಗಳು, ಹಣ್ಣುಗಳು, ಬೀಜಗಳು ಮುಂತಾದವುಗಳನ್ನು ತಿನ್ನುತ್ತವೆ. ಚಿಂಪಾಂಜಿಗಳು ಅಂದಾಜು ಮುನ್ನೂರು ಬಗೆಗಳ ಸಸ್ಯಾಹಾರಗಳನ್ನು ಸೇವಿಸುತ್ತವೆ. ಚಿಂಪಾಂಜಿಗಳು ಗುಂಪುಗಳಲ್ಲಿ ವಾಸಿಸುತ್ತವೆ. ಪ್ರತಿ ಗುಂಪಿನಲ್ಲಿ 10 ರಿಂದ 15 ಚಿಂಪಾಂಜಿಗಳಿರುತ್ತವೆ. ಅವುಗಳ ನೈಸರ್ಗಿಕ ನೆಲೆಗಳಲ್ಲಿ ಹಿಂದೆ ಭಾರೀ ಸಂಖ್ಯೆಯಲ್ಲಿ ನೆಮ್ಮದಿಯಿಂದ ಜೀವಿಸುತ್ತಿದ್ದವು. ಆದರೆ ಈಗ ಅವುಗಳ ಸಂಖ್ಯೆ ಕಳೆದ ಕೆಲವು ದಶಕಗಳಿಂದ ಕ್ಷಿಪ್ರವಾಗಿ ಕ್ಷೀಣಿಸುತ್ತಿದೆ. ತಜ್ಞರ ಗಣತಿಗಳ ಪ್ರಕಾರ ಚಿಂಪಾಂಜಿಗಳ ಈಗಿನ ಒಟ್ಟು ಸಂಖ್ಯೆ ಮೂರು ಲಕ್ಷದಷ್ಟಿದೆ ಅಷ್ಟೆ. ಹಾಗಾಗಿ ಅವು ಅಳಿವಿನ ಅಪಾಯದಲ್ಲಿರುವ ಪ್ರಾಣಿಗಳ ಪಟ್ಟಿಯಲ್ಲಿವೆ. ಚಿಂಪಾಂಜಿಗಳ ಆವಾಸಸ್ಥಾನಗಳಲ್ಲಿ ನಡೆಯುತ್ತಿರುವ ಅರಣ್ಯ ನಾಶ, ವನ್ಯ ಮಾಂಸಕ್ಕಾಗಿ ವ್ಯಾಪಕವಾಗಿರುವ ಕಳ್ಳ ಬೇಟೆ ಮುಂತಾದ ಮಾನವ ಚಟುವಟಿಕೆಗಳು ಚಿಂಪಾಂಜಿಗಳನ್ನು ವಿನಾಶದ ಅಂಚಿಗೆ ತಂದಿವೆ. ಚಿಂಪಾಂಜಿಗಳ ಬಗ್ಗೆ ಜಾಗೃತಿ ಮೂಡಿಸಲು ಜುಲೈ 14ರಂದು **"ವಿಶ್ವ ಚಿಂಪಾಂಜಿ ದಿನ"** ವೆಂದು ಆಚರಿಸಲಾಗುತ್ತದೆ. ಇಂದು ಹಲವು ಪ್ರಾಣಿಗಳು ಅಳಿವಿನಂಚಿಗೆ ತಲುಪಿವೆ. ಹಾಗಾಗಿ ನಾವೆಲ್ಲರೂ ಈ ಅಮೂಲ್ಯ ಜೀವಸಂಕುಲವನ್ನು ರಕ್ಷಿಸುವ ಸಲುವಾಗಿ ಟೊಂಕ ಕಟ್ಟಿ ನಿಲ್ಲಬೇಕಾಗಿದೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

ಕಾನನ ಪತ್ರಿಕೆಯ ಇ-ಮೇಲ್ ವಿಳಾಸ: kaanana.mag@gmail.com
ಅಂಚೆ ವಿಳಾಸ:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,

ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.